ವಿಜಯಪುರ । ಸಂಪುಟ 04 । ಸಂಚಿಕೆ 247 । ಪುಟ 04 । ₹ 3.00

https://udayarashminews.com

udayarashmi 90088 88340

ಉದಯ ರಶ್ಮಿ

Udayarashmi Kannada Daily

ಜನಪರ-ಜೀವಪರ

ಕನ್ನಡ ದಿನಪತ್ರಿಕೆ

ಸಂಪಾದಕ : ಇಂದುಶೇಖರ ಮಣೂರ

Editor: Indushekhar Manur

editor.udayarashmi@gmail.com

RNI NO: KARKAN/2023/86203

ಗುರುವಾರ, ನವೆಂಬರ್ 26, 2026

"ಹಿರಿಯ ಬಿಜೆಪಿ ನಾಯಕ ಹಾಗೂ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಈ ವಾರ ಪ್ರಜಾಪ್ರಭುತ್ವದ ಬಗ್ಗೆ ಉಪನ್ಯಾಸ ನೀಡಲು ಕಲಬುರಗಿಗೆ ಬರುತ್ತಿದ್ದಾರೆ. ಆದರೆ, ಕಲಬುರಗಿಯಲ್ಲಿ ಪ್ರಜಾಪ್ರಭುತ್ವಕ್ಕೆ ಧಕ್ಕೆ ತಂದ ಆರೋಪ ಅವರದೇ ಪಕ್ಷದ ನಾಯಕರ ಮೇಲಿದೆ ಎಂಬುದನ್ನು ಯಾರಾದರೂ ಅವರಿಗೆ ತಿಳಿಸಬೇಕಿದೆ ."



■ ಪ್ರಿಯಾಂಕ ಖರ್ಗೆ
ಗೃಹ ಸಚಿವರು



ಬ್ಯಾಂಕ್ ಗ್ರಾಹಕರೊಂದಿಗೆ ಸಹಾನುಭೂತಿಯಿಂದ ನಡೆದುಕೊಳ್ಳಿ

■ ಉದಯರಶ್ಮಿ ದಿನಪತ್ರಿಕೆ

ಜಿ.ಪಂ. ಸಿಇಒ ಆನಂದ ಪ್ರಕಾಶ್ ಮೀನಾ ಬ್ಯಾಂಕ್ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ

ವಿಜಯಪುರ: ಬ್ಯಾಂಕ್‌ಗಳಿಗೆ ವಿವಿಧ ಸಾಲ ಸೌಲಭ್ಯಗಳಿಗಾಗಿ ಅರ್ಜಿ ಸಲ್ಲಿಸುವ ಗ್ರಾಹಕರೊಂದಿಗೆ ಬ್ಯಾಂಕ್ ಅಧಿಕಾರಿಗಳು ಸೌಜನ್ಯ ಹಾಗೂ ಸಹಾನುಭೂತಿಯಿಂದ ನಡೆದುಕೊಳ್ಳಬೇಕು ಎಂದು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಆನಂದ ಪ್ರಕಾಶ್ ಮೀನಾ ಅವರು ಬ್ಯಾಂಕ್ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ನಗರದ ಜಿಲ್ಲಾ ಪಂಚಾಯಿತಿಯಲ್ಲಿ ಬುಧವಾರ ಜಿಲ್ಲಾ ಅಗ್ರಗಣ್ಯ ಬ್ಯಾಂಕ್ ವತಿಯಿಂದ ಆಯೋಜಿಸಿದ್ದ ತ್ರೈಮಾಸಿಕ ಜಿಲ್ಲಾ ಸಮಾಲೋಚನಾ ಸಮಿತಿ ಹಾಗೂ ಜಿಲ್ಲಾ ಮಟ್ಟದ ಪರಿಶೀಲನಾ ಸಮಿತಿ ಸಭೆಯಲ್ಲಿ ಅವರು ಮಾತನಾಡಿದರು. ಬ್ಯಾಂಕ್‌ಗಳಿಗೆ ಬರುವ ಗ್ರಾಹಕರಿಗೆ ಸೂಕ್ತ ಸ್ಪಂದನೆ ನೀಡಬೇಕು. ಅವರೊಂದಿಗೆ ಯಾವಾಗಲೂ ಸಕಾರಾತ್ಮಕ ಮನೋಭಾವದಿಂದ ನಡೆದುಕೊಳ್ಳಬೇಕು. ಭಾರತೀಯ ರಿಸರ್ವ್ ಬ್ಯಾಂಕ್‌ನ ಮಾರ್ಗಸೂಚಿಗಳನ್ವಯ ಬ್ಯಾಂಕ್‌ಗಳ ವಿವಿಧ ಯೋಜನೆಗಳು ಹಾಗೂ ಸೌಲಭ್ಯಗಳ ಕುರಿತು ಗ್ರಾಹಕರಿಗೆ ಅರಿವು ಮೂಡಿಸಿ, ಅಗತ್ಯ ಮಾರ್ಗದರ್ಶನ ನೀಡಬೇಕು. ಸಾಲಕ್ಕಾಗಿ ಅರ್ಜಿ ಸಲ್ಲಿಸಿದವರ ದಾಖಲೆಗಳು ಅಪೂರ್ಣವಾಗಿದ್ದರೆ, ಯಾವ ದಾಖಲೆಗಳನ್ನು ಸಲ್ಲಿಸಬೇಕು ಎಂಬುದನ್ನು ಸ್ಪಷ್ಟವಾಗಿ ತಿಳಿಸಬೇಕು. ಯಾವುದೇ ಅರ್ಜಿಯನ್ನು ಅನಗತ್ಯವಾಗಿ ಬಾಕಿ ಉಳಿಸಿಕೊಳ್ಳದೆ ನಿಗದಿತ ಸಮಯದಲ್ಲಿ ವಿಲೇವಾರಿ ಮಾಡಬೇಕು ಎಂದು ಸೂಚಿಸಿದರು.

ವಿವಿಧ ಇಲಾಖೆಗಳು ಹಾಗೂ ಅಭಿವೃದ್ಧಿ ನಿಗಮಗಳ ಮೂಲಕ ಅನುಷ್ಠಾನಗೊಳ್ಳುತ್ತಿರುವ ಸಾಲ ಮತ್ತು ಸ್ವಯಂ ಉದ್ಯೋಗ ಯೋಜನೆಗಳಡಿ ಅನೇಕ ಅರ್ಹ ಫಲಾನುಭವಿಗಳು ಬ್ಯಾಂಕ್‌ಗಳಿಗೆ ಅರ್ಜಿ ಸಲ್ಲಿಸಿದ್ದಾರೆ. ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉದ್ಯೋಗಿನಿ ಯೋಜನೆ, ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಸ್ವಾವಲಂಬಿ ಸಾರಥಿ ಯೋಜನೆ, ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಸ್ವಾವಲಂಬಿ ಟ್ಯಾಕ್ಸಿ, ಗೂಡ್ಸ್ ವಾಹನ ಹಾಗೂ ಆಟೋ ರಿಕ್ಷಾ ಯೋಜನೆಗಳು, ಡಾ. ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದ ಯೋಜನೆಗಳು, ಪ್ರಧಾನಮಂತ್ರಿ ಉದ್ಯೋಗ ಸೃಷ್ಟಿ ಕಾರ್ಯಕ್ರಮ ಹಾಗೂ ಸಮಾಜ ಕಲ್ಯಾಣ ಇಲಾಖೆಯ ಉದ್ಯಮಶೀಲತೆ ಮತ್ತು ಸ್ವಾವಲಂಬಿ ಸಾರಥಿ ಯೋಜನೆಗಳಡಿ ಸಲ್ಲಿಕೆಯಾಗಿರುವ ಅರ್ಜಿಗಳನ್ನು ತ್ವರಿತವಾಗಿ ಪರಿಶೀಲಿಸಬೇಕು ಎಂದರು.

ಅದೇ ರೀತಿ ಪ್ರಧಾನಮಂತ್ರಿ ಆವಾಸ್ ಯೋಜನೆ ನಗರ, ಕೃಷಿ ಇಲಾಖೆಯ ಪ್ರಧಾನಮಂತ್ರಿ ಸೂಕ್ಷ್ಮ ಆಹಾರ ಸಂಸ್ಕರಣಾ ಉದ್ದಿಮೆಗಳ ಔಪಚಾರಿಕೀಕರಣ ಯೋಜನೆ, ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮದ ಯೋಜನೆಗಳು, ಹೆಸ್ಕಾಂ ಇಲಾಖೆಯ ಪ್ರಧಾನಮಂತ್ರಿ ಸೂರ್ಯ ಘರ್,ಮುಫ್ತ್ ಬಿಜ್ಲಿ ಯೋಜನೆ, ಪ್ರಧಾನಮಂತ್ರಿ ಜೀವನ್ ಜ್ಯೋತಿ ಬಿಮಾ ಯೋಜನೆ, ಪ್ರಧಾನಮಂತ್ರಿ ಸುರಕ್ಷಾ ಬಿಮಾ ಯೋಜನೆ ಹಾಗೂ ಅಟಲ್ ಪಿಂಚಣಿ ಯೋಜನೆಗಳಡಿ ಅರ್ಹ ಫಲಾನುಭವಿಗಳಿಗೆ ಸಕಾಲದಲ್ಲಿ ಸೌಲಭ್ಯ ಕಲ್ಪಿಸಬೇಕು ಎಂದು ತಿಳಿಸಿದರು.

ವಿವಿಧ ಯೋಜನೆಗಳಡಿ ಸಾಲ ಸೌಲಭ್ಯಕ್ಕಾಗಿ ಸಲ್ಲಿಕೆಯಾಗಿರುವ ಅರ್ಜಿಗಳು ಇನ್ನೂ ಬಾಕಿ ಉಳಿದಿರುವುದು ಗಮನಕ್ಕೆ ಬಂದಿದೆ. ಸಂಬಂಧಪಟ್ಟ ಬ್ಯಾಂಕ್ ವ್ಯವಸ್ಥಾಪಕರು ಬಾಕಿ ಅರ್ಜಿಗಳನ್ನು ಪರಿಶೀಲಿಸಿ ಒಂದು ಬೇಗ ಸಂಪೂರ್ಣವಾಗಿ ವಿಲೇವಾರಿ ಮಾಡಬೇಕು. ಅರ್ಹ ಫಲಾನುಭವಿಗಳಿಗೆ ನಿಗದಿತ ಸಮಯದಲ್ಲಿ ಸಾಲ ಸೌಲಭ್ಯ ಒದಗಿಸುವಲ್ಲಿ ನಿರ್ಲಕ್ಷ್ಯ ಅಥವಾ ವಿಳಂಬ ಕಂಡುಬಂದಲ್ಲಿ ಸಂಬಂಧಪಟ್ಟ ಬ್ಯಾಂಕ್ ವ್ಯವಸ್ಥಾಪಕರ ವಿರುದ್ಧ ಶಿಸ್ತಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು.

ಸಭೆಯಲ್ಲಿ ಜಿಲ್ಲಾ ಅಗ್ರಗಣ್ಯ ಬ್ಯಾಂಕ್ ವ್ಯವಸ್ಥಾಪಕ ಬಿ. ಸಿದ್ದಯ್ಯ, ನಬಾರ್ಡ್ ಜಿಲ್ಲಾ ಅಭಿವೃದ್ಧಿ ವ್ಯವಸ್ಥಾಪಕ ವಿಕಾಸ ರಾಠೋಡ, ಭಾರತೀಯ ರಿಸರ್ವ್ ಬ್ಯಾಂಕ್‌ನ ಸಹಾಯಕ ಮಹಾಪ್ರಬಂಧಕ ಶರವಣನ್, ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

ಕಾನೂನು ಅರಿವಿನಿಂದಲೇ ಎಲ್ಲರಿಗೂ ನ್ಯಾಯದ ಲಭ್ಯತೆ ಸಾಧ್ಯ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷ ನ್ಯಾಯಮೂರ್ತಿ ಹರೀಶ ಎ. ಅಭಿಮತ

ವಿಜಯಪುರ: ಸಮಾಜದ ಪ್ರತಿಯೊಬ್ಬರೂ ಕಾನೂನಿನ ಅರಿವು ಹೊಂದಿರಬೇಕು. ಪ್ರತಿಯೊಬ್ಬರಿಗೂ ಉಚಿತ ಕಾನೂನು ನೆರವು ಪಡೆಯುವ ಹಕ್ಕಿದೆ. ಕಾನೂನು ಸೇವೆಗಳ ಪ್ರಾಧಿಕಾರದ ಮೂಲಕ ದೊರೆಯುವ ಸೌಲಭ್ಯಗಳ ಕುರಿತು ಸಾರ್ವಜನಿಕರು ತಿಳಿದುಕೊಂಡು ಸದುಪಯೋಗಪಡಿಸಿಕೊಳ್ಳಬೇಕು ಎಂದು ವಿಜಯಪುರ ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರಾದ ನ್ಯಾಯಮೂರ್ತಿ ಹರೀಶ ಎ. ಹೇಳಿದರು.

ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಬೆಂಗಳೂರು, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ,ವಿಜಯಪುರ, ತಾಲೂಕು ಕಾನೂನು ಸೇವೆಗಳ ಸಮಿತಿ, ನ್ಯಾಯವಾದಿಗಳ ಸಂಘ, ತಾಲೂಕು ಪಂಚಾಯತ್ ಮುದ್ದೇಬಿಹಾಳ, ಗ್ರಾಮ ಪಂಚಾಯತ್ ಬಿದರಕುಂದಿ ಹಾಗೂ ವಿವಿಧ ಸರ್ಕಾರಿ ಇಲಾಖೆಗಳ ಸಹಯೋಗದಲ್ಲಿ ಮೆಗಾ ಡ್ರೈವ್ ಫೇಸ್-೪ (ಪಾರ್ಟ್-೪೪) ಅಡಿಯಲ್ಲಿ ನ.24ರಂದು ಆಯೋಜಿಸಿದ್ದ ಉಚಿತ ಕಾನೂನು ನೆರವು ಮತ್ತು ಕಾನೂನು ಅರಿವು ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಕಾರ್ಯಕ್ರಮದಲ್ಲಿ ಮಹಿಳೆಯರ ಹಕ್ಕುಗಳು ಮತ್ತು ಸಬಲೀಕರಣ, ಬಾಲ್ಯವಿವಾಹ ನಿಷೇಧ, ಮಕ್ಕಳ ಹಕ್ಕುಗಳ ರಕ್ಷಣೆ ಹಾಗೂ ಮಕ್ಕಳ ಮೇಲಿನ ದೌರ್ಜನ್ಯ ತಡೆ ಕುರಿತು ಅರಿವು ಮೂಡಿಸಲಾಯಿತು. ಹಿರಿಯ ನಾಗರಿಕರ ಹಕ್ಕುಗಳು ಮತ್ತು ರಕ್ಷಣೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಹಕ್ಕುಗಳು, ಕಾರ್ಮಿಕರ ಹಕ್ಕುಗಳು ಹಾಗೂ ಅವರಿಗೆ ದೊರೆಯುವ ಸರ್ಕಾರಿ ಸೌಲಭ್ಯಗಳ ಕುರಿತು ಮಾಹಿತಿ ನೀಡಲಾಯಿತು.

ವಿಶೇಷ ಚೇತನರ ಹಕ್ಕುಗಳು ಮತ್ತು ಸೌಲಭ್ಯಗಳು, ಕೌಟುಂಬಿಕ ದೌರ್ಜನ್ಯ ತಡೆ ಕಾಯ್ದೆ, ಸೈಬರ್ ಅಪರಾಧಗಳಿಂದ ರಕ್ಷಣೆ, ಮೋಟಾರು ವಾಹನ ಅಪಘಾತ ಪರಿಹಾರ ಪಡೆಯುವ ವಿಧಾನ ಹಾಗೂ ಕಾನೂನು ನೆರವಿನ ಕುರಿತು ತಿಳಿಸಲಾಯಿತು.ಲೋಕ ಅದಾಲತ್ ಮತ್ತು ರಾಜಿ ಸಂಧಾನದ ಮಹತ್ವ, ಗ್ರಾಹಕರ ಹಕ್ಕುಗಳು ಹಾಗೂ ಗ್ರಾಹಕ ಸಂರಕ್ಷಣಾ ಕಾಯ್ದೆ, ಎಲ್ಲರಿಗೂ ನ್ಯಾಯದ ಲಭ್ಯತೆ,ಉಚಿತ ಕಾನೂನು ನೆರವು ಮತ್ತು ವಿವಿಧ ಸರ್ಕಾರಿ ಕಲ್ಯಾಣ ಯೋಜನೆಗಳ ಬಗ್ಗೆಯೂ ಅರಿವು ಮೂಡಿಸಲಾಯಿತು.

ಕಾರ್ಯಕ್ರಮದಲ್ಲಿ ಹಿರಿಯ ಸಿವಿಲ್ ನ್ಯಾಯಾಧೀಶರಾದ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಅರವಿಂದ ಎಸ್. ಹಾಗರಗಿ, ಮುದ್ದೇಬಿಹಾಳ ಹಿರಿಯ ಸಿವಿಲ್ ನ್ಯಾಯಾಧೀಶ ರವೀಂದ್ರಕುಮಾರ ಬಿ. ಕಟ್ಟಿಮನಿ, ಸಿವಿಲ್ ನ್ಯಾಯಾಧೀಶರು ಹಾಗೂ ತಾಲೂಕು ಕಾನೂನು ಸೇವೆಗಳ ಸಮಿತಿಯ ಸದಸ್ಯ ಕಾರ್ಯದರ್ಶಿ ರಾಮಮೂರ್ತಿ ಎನ್

ಮುದ್ದೇಬಿಹಾಳ ತಾಲೂಕು ಪಂಚಾಯತ್ ಕಾರ್ಯನಿರ್ವಾಹಕಅಧಿಕಾರಿಸಂಗನಗೌಡಬಿರಾದಾರ ಮತ್ತು ಮುದ್ದೇಬಿಹಾಳ ನ್ಯಾಯವಾದಿಗಳ ಸಂಘದ ಅಧ್ಯಕ್ಷ ಶಶಿಕಾಂತ ಸಿ. ಮಾಲಗತ್ತಿ ಉಪಸ್ಥಿತರಿದ್ದರು.

ಗ್ರಾಮೀಣ ಸ್ಥಳೀಯ ಸಂಸ್ಥೆಗಳ ಚುನಾವಣೆ ಎದುರಿಸಲು ಕಾಂಗ್ರೆಸ್ ಸಂಪೂರ್ಣ ಸಿದ್ಧ । ಗ್ರಾಮೀಣಾಭಿವೃದ್ಧಿ ಸಚಿವ ಈಶ್ವರ್ ಖಂಡ್ರೆ ಹೇಳಿಕೆ

ಜಿ.ಪಂ, ತಾ.ಪಂ ಮೀಸಲಾತಿ ಪ್ರಕಟ; ಜನವರಿಯಲ್ಲಿ ಚುನಾವಣೆ ಸಾಧ್ಯತೆ

ಬೆಂಗಳೂರು: ಜಿಲ್ಲಾ ಪಂಚಾಯಿತಿ (ಜಿಪಂ) ಹಾಗೂ ತಾಲೂಕು ಪಂಚಾಯಿತಿ (ತಾಪಂ) ಕ್ಷೇತ್ರಗಳ ಮೀಸಲಾತಿಗೆ ಸಂಬಂಧಿಸಿದ ಅಂತಿಮ ಅಧಿಸೂಚನೆಯನ್ನು ರಾಜ್ಯ ಸರ್ಕಾರ ಹೊರಡಿಸಿದ್ದು, ಮುಂದಿನ ವರ್ಷ ಜನವರಿಯಲ್ಲಿ ಚುನಾವಣೆ ನಡೆಯುವ ಸಾಧ್ಯತೆ ಇದೆ ಎಂದು ಗ್ರಾಮೀಣಾಭಿವೃದ್ಧಿ ಸಚಿವ ಈಶ್ವರ್ ಖಂಡ್ರೆ ತಿಳಿಸಿದ್ದಾರೆ.

ಉಚಿತ ಸದಸ್ಯತ್ವ- 51 ಲಕ್ಷ ಮಕ್ಕಳ ನೋಂದಣಿ

ಅರಿವು ಕೇಂದ್ರಗಳಲ್ಲಿ 6ರಿಂದ 18 ವರ್ಷದೊಳಗಿನ ಮಕ್ಕಳಿಗೆ ಉಚಿತ ಗ್ರಂಥಾಲಯ ಸದಸ್ಯತ್ವ ಒದಗಿಸಲಾಗಿದ್ದು, ಗ್ರಂಥಾಲಯದಿಂದ ಪುಸ್ತಕಗಳನ್ನು ಮನೆಗೆ ತಗೆದುಕೊಂಡು ಹೋಗಿ ಓದುವ ಅವಕಾಶ ಕಲ್ಪಿಸಲಾಗಿದೆ. ಈ ಉಪಕ್ರಮದ ಪರಿಣಾಮವಾಗಿ ರಾಜ್ಯದ ಗ್ರಾಮೀಣ ಗ್ರಂಥಾಲಯಗಳಲ್ಲಿ 51 ಲಕ್ಷಕ್ಕೂ ಹೆಚ್ಚು ಮಕ್ಕಳು ಸದಸ್ಯರಾಗಿ ನೋಂದಾಯಿಸಿಕೊಂಡಿದ್ದಾರೆ ಎಂದು ಸಚಿವ ಖಂಡ್ರೆ ತಿಳಿಸಿದರು.

ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದ 1,101 ಜಿಲ್ಲಾ ಪಂಚಾಯಿತಿ ಕ್ಷೇತ್ರಗಳು ಹಾಗೂ 234 ತಾಲೂಕು ಪಂಚಾಯಿತಿಗಳ 3,580 ಕ್ಷೇತ್ರಗಳಿಗೆ ಮೀಸಲಾತಿ ಪ್ರಕಟಿಸಲಾಗಿದೆ ಎಂದು ಹೇಳಿದರು.



ಪ್ರಸ್ತುತ ಸರ್ಕಾರ ಕೆಲವು ಪಂಚಾಯಿತಿಗಳನ್ನು ಮೇಲ್ದರ್ಜೆಗೇರಿಸಿರುವುದರಿಂದ ಕ್ಷೇತ್ರಗಳ ಪುನರ್‌ವಿಂಗಡಣೆ ಮಾಡಬೇಕಾಯಿತು. ಅಲ್ಲದೆ, ಕೆಲವು ಗ್ರಾಮ ಪಂಚಾಯಿತಿ ಕ್ಷೇತ್ರಗಳನ್ನು ಪುರಸಭೆ, ನಗರಸಭೆ ಹಾಗೂ ಮಹಾನಗರ ಪಾಲಿಕೆ ವ್ಯಾಪ್ತಿಗೆ ಸೇರ್ಪಡೆಗೊಳಿಸಿದ್ದರಿಂದ ಚುನಾವಣೆ ವಿಳಂಬವಾಗಿತ್ತು ಎಂದು ಹೇಳಿದರು.

ರಾಜ್ಯ ಸರ್ಕಾರ ತನ್ನ ಜವಾಬ್ದಾರಿಯನ್ನು ನಿರ್ವಹಿಸಿದೆ. ರಾಜ್ಯ ಚುನಾವಣಾ ಆಯೋಗವು ಚುನಾವಣಾ ವೇಳಾಪಟ್ಟಿ ಪ್ರಕಟಿಸಿ ಚುನಾವಣೆ ನಡೆಸಲಿದೆ. ಬಹುತೇಕ ಜನವರಿಯಲ್ಲಿ ಚುನಾವಣೆ ನಡೆಯುವ ಸಾಧ್ಯತೆ ಇದೆ. ಗ್ರಾಮೀಣ ಸ್ಥಳೀಯ ಸಂಸ್ಥೆಗಳ ಚುನಾವಣೆಯನ್ನು ಎದುರಿಸಲು ಕಾಂಗ್ರೆಸ್ ಸಂಪೂರ್ಣ ಸಿದ್ಧವಾಗಿದೆ ಎಂದು ತಿಳಿಸಿದರು.

6,342 ಗ್ರಾಮ ಗ್ರಂಥಾಲಯಗಳಿಗೆ ಚಾಲನೆ



ರಾಜ್ಯಾದ್ಯಂತ ಗ್ರಾಮ ಪಂಚಾಯಿತಿಗಳ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ 5,888 ಅಸ್ತಿತ್ವದಲ್ಲಿರುವ ಅರಿವು ಕೇಂದ್ರಗಳ ಜೊತೆಗೆ, ಹೆಚ್ಚುವರಿಯಾಗಿ 6,342 ಗ್ರಾಮ ಗ್ರಂಥಾಲಯಗಳಿಗೆ ಸಚಿವ ಈಶ್ವರ ಖಂಡ್ರೆ ಅಧಿಕೃತವಾಗಿ ಚಾಲನೆ ನೀಡಿದರು. 5,888 ಅರಿವು ಕೇಂದ್ರಗಳು ಸಮುದಾಯ ಗ್ರಂಥಾಲಯ ಹಾಗೂ ಡಿಜಿಟಲ್ ಕಲಿಕಾ ಕೇಂದ್ರಗಳಾಗಿ ದಿನಕ್ಕೆ ಕನಿಷ್ಠ ಎಂಟು ಗಂಟೆ, ವಾರದಲ್ಲಿ ಆರು ದಿನ ಕಾರ್ಯನಿರ್ವಹಿಸುತ್ತಿವೆ ಎಂದು ಖಂಡ್ರೆ ಹೇಳಿದರು. ಗ್ರಾಮ ಪಂಚಾಯಿತಿ ಕೇಂದ್ರದಲ್ಲಿ ಅರಿವು ಕೇಂದ್ರವಿದ್ದರೂ, ಇತರ ಗ್ರಾಮಗಳಲ್ಲಿ ಗ್ರಂಥಾಲಯಗಳಿಲ್ಲ. ಹೀಗಾಗಿ, ಅಂತಹ ಗ್ರಾಮಗಳಲ್ಲಿ ತಲಾ 4 ಲಕ್ಷ ವೆಚ್ಚದಲ್ಲಿ ಶಾಖಾ ಗ್ರಂಥಾಲಯಗಳನ್ನು ಸ್ಥಾಪಿಸಲು ಸರ್ಕಾರ ನಿರ್ಧರಿಸಿದೆ ಎಂದು ಅವರು ತಿಳಿಸಿದರು.

ವಿಶ್ವ ಪರಂಪರೆ ಸಪ್ತಾಹ: ಐತಿಹಾಸಿಕ ಸ್ಮಾರಕಗಳ ವೀಕ್ಷಣೆಗೆ ಟಾಂಗಾ ಜಾಥಾ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ವಿಶ್ವ ಪರಂಪರೆಯ ಮಹತ್ವ ಸಾರುವುದರೊಂದಿಗೆ ಐತಿಹಾಸಿಕ ಸ್ಮಾರಕಗಳ ಸಂರಕ್ಷಣೆ, ಸ್ವಚ್ಛತೆ ಹಾಗೂ ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡುವ ಉದ್ದೇಶದಿಂದ ವಿಶ್ವ ಪಾರಂಪರಿಕ ಸಪ್ತಾಹ-2026ರ ಅಂಗವಾಗಿ ವಿಜಯಪುರ ನಗರದಲ್ಲಿ ಸಾಂಪ್ರದಾಯಿಕ ಟಾಂಗಾ ಜಾಥಾ ಆಯೋಜಿಸಲಾಯಿತು. ನಗರದ ಐತಿಹಾಸಿಕ ಗೋಳಗುಮ್ಮಟದ ಆವರಣದಲ್ಲಿ ಜಿಲ್ಲಾಧಿಕಾರಿ ಡಾ. ಆನಂದ ಕೆ. ಅವರು ಟಾಂಗಾ ಜಾಥಾಕ್ಕೆ ಚಾಲನೆ ನೀಡಿದರು.

ಜಾಥಾಕ್ಕೆ ಚಾಲನೆ ನೀಡಿ ಮಾತನಾಡಿದ ಜಿಲ್ಲಾಧಿಕಾರಿ ಡಾ. ಆನಂದ ಕೆ. ಅವರು, ವಿಜಯಪುರ ಜಿಲ್ಲೆಯು ಐತಿಹಾಸಿಕ ಸ್ಮಾರಕಗಳು ಹಾಗೂ ಅಪೂರ್ವ ವಾಸ್ತುಶಿಲ್ಪದ ಮೂಲಕ ದೇಶ-ವಿದೇಶಗಳಲ್ಲಿ ವಿಶಿಷ್ಟ ಗುರುತನ್ನು ಹೊಂದಿದೆ. ಇಂತಹ ಅಮೂಲ್ಯ ಐತಿಹಾಸಿಕ ಪರಂಪರೆಯನ್ನು ಸಂರಕ್ಷಿಸಿ ಮುಂದಿನ ಪೀಳಿಗೆಗೆ ಪರಿಚಯಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ. ಸ್ಮಾರಕಗಳ ಸ್ವಚ್ಛತೆ, ಸಂರಕ್ಷಣೆ ಹಾಗೂ ಅವುಗಳ ಐತಿಹಾಸಿಕ ಮಹತ್ವದ ಕುರಿತು ಸಾರ್ವಜನಿಕರು ತಿಳಿದುಕೊಳ್ಳಬೇಕು. ಪ್ರವಾಸೋದ್ಯಮ ಅಭಿವೃದ್ಧಿಗೆ ಇಂತಹ ವಿಶಿಷ್ಟ ಕಾರ್ಯಕ್ರಮಗಳು ಪೂರಕವಾಗಲಿದ್ದು, ಯುವಜನರು ಹಾಗೂ ಸಾರ್ವಜನಿಕರು ಜಿಲ್ಲೆಯ ಐತಿಹಾಸಿಕ ಸ್ಮಾರಕಗಳ ಬಗ್ಗೆ ಹೆಚ್ಚಿನ ಆಸಕ್ತಿ ಬೆಳೆಸಿಕೊಳ್ಳಬೇಕು.ಜಿಲ್ಲೆಯು ಗೋಳಗುಮ್ಮಟ, ಇಬ್ರಾಹಿಂ ರೋಜಾ, ಗಗನ ಮಹಲ್, ಆನಂದ ಮಹಲ್, ಬಾರಾ ಕಮಾನ್ ಸೇರಿದಂತೆ ಹಲವು ಅಪೂರ್ವ ವಾಸ್ತುಶಿಲ್ಪದ ಸ್ಮಾರಕಗಳನ್ನು ಹೊಂದಿದ್ದು, ದೇಶ-ವಿದೇಶಗಳ ಪ್ರವಾಸಿಗರನ್ನು ಆಕರ್ಷಿಸುತ್ತಿದೆ. ಈ ಸ್ಮಾರಕಗಳು ನಾಡಿನ ಇತಿಹಾಸ, ಸಂಸ್ಕೃತಿ, ಕಲೆ, ವಾಸ್ತುಶಿಲ್ಪ ಅಮೂಲ್ಯ ಪರಂಪರೆಯ ಸಂಕೇತಗಳಾಗಿವೆ.ಸ್ಮಾರಕಗಳ ಆವರಣದಲ್ಲಿ ಸ್ವಚ್ಛತೆ ಕಾಪಾಡುವುದು ಹಾಗೂ ಯಾವುದೇ ರೀತಿಯಲ್ಲಿ ಹಾನಿಯಾಗದಂತೆ ಸಂರಕ್ಷಿಸುವುದು ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ ಎಂದು ಹೇಳಿದರು.

ಜಿಲ್ಲಾಡಳಿತ, ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಪ್ರವಾಸೋದ್ಯಮ ಇಲಾಖೆ ಹಾಗೂ ಬಿ.ಎಲ್.ಡಿ.ಇ ಸಂಸ್ಥೆಯ ಶ್ರೀಮತಿ ಬಂಗಾರಮ್ಮ ಸಜ್ಜನ ಮಹಿಳಾ ಕಾಲೇಜಿನ ಸಹಯೋಗದಲ್ಲಿ ಬುಧವಾರ ಬೆಳಿಗ್ಗೆ 9.30ಕ್ಕೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಐತಿಹಾಸಿಕ ಸ್ಮಾರಕಗಳು, ಶಿಲ್ಪಕಲೆ, ವಾಸ್ತುಶಿಲ್ಪ ಹಾಗೂ ಸಾಂಸ್ಕೃತಿಕ ಪರಂಪರೆಯ ಮಹತ್ವವನ್ನು ಸಾರ್ವಜನಿಕರಿಗೆ ಪರಿಚಯಿಸುವುದು ಮತ್ತು ಅವುಗಳ ಸಂರಕ್ಷಣೆಯ ಅಗತ್ಯದ ಕುರಿತು ಜಾಗೃತಿ ಮೂಡಿಸುವುದು ಈ ಸಪ್ತಾಹದ ಪ್ರಮುಖ ಉದ್ದೇಶವಾಗಿದೆ. ಈ ಹಿನ್ನೆಲೆಯಲ್ಲಿ ಸಪ್ತಾಹದ ಅಂಗವಾಗಿ ವಿವಿಧ ಜಾಗೃತ

ಶರಣಬಸವ ವಿಶ್ವವಿದ್ಯಾಲಯದ ವಾರ್ಷಿಕ ಕ್ರೀಡಾಕೂಟಕ್ಕೆ ಚಾಲನೆ

ಕಲಬುರಗಿ: ಶರಣಬಸವೇಶ್ವರ ಸಂಸ್ಥಾನದ 9ನೇ ಪೀಠಾಧಿಪತಿಗಳಾದ ಪೂಜ್ಯ ದೊಡ್ಡಪ್ಪ ಅಪ್ಪಾ–ಜಿಯವರು ಸೋಮವಾರ ಕಲಬುರಗಿ ನಗರದ ಶರಣಬಸವ ವಿಶ್ವವಿದ್ಯಾಲಯದ ಕ್ರೀಡಾಂಗಣದ ಕ್ರಿಕೆಟ್ ಅಭ್ಯಾಸದ ನೆನಲ್ಲಿ ಔಸ್ವಿಂಗರ್ ಎಸೆದು ನಾಲ್ಕು ದಿನಗಳ ವಾರ್ಷಿಕ ಕ್ರೀಡಾಕೂಟಕ್ಕೆ ಸಾಂಕೇತಿಕವಾಗಿ ಚಾಲನೆ ನೀಡಿದರು.

ನಂತರ ಪೂಜ್ಯ ದೊಡ್ಡಪ್ಪ ಅಪ್ಪಾಜಿಯವರು ಪಾರಿವಾಳಗಳನ್ನು ಹಾರಿಬಿಟ್ಟು, ತಮ್ಮ ಜನ್ಮದಿನ ಹಾಗೂ ಶರಣಬಸವೇಶ್ವರ ವಿದ್ಯಾವರ್ಧಕ ಸಂಘದ ಅಧ್ಯಕ್ಷರಾದ ಮಾತೋಶ್ರೀ ಪೂಜ್ಯ ಡಾ. ದಾಕ್ಷಾಯಿಣಿ ಅವ್ವಾಜಿಯವರ ಜನ್ಮದಿನದ ಸ್ಮರಣಾರ್ಥ ಕೇಕ್ ಕತ್ತರಿಸಿ ಸಂಭ್ರಮಿಸಿದರು. ಪೂಜ್ಯ ಅಪ್ಪಾಜಿ ಹಾಗೂ ಮಾತೋಶ್ರೀ ಡಾ. ಅವ್ವಾಜಿಯವರ ಜನ್ಮದಿನದ ಅಂಗವಾಗಿ ಈ ಕ್ರೀಡಾಕೂಟವನ್ನು ಆಯೋಜಿಸಲಾಗಿದೆ. ಈ ಸಂದರ್ಭದಲ್ಲಿ ಕುಮಾರಿ ಮಹೇಶ್ವರಿ ಎಸ್. ಅಪ್ಪ, ವಿಶ್ವವಿದ್ಯಾಲಯದ ಕುಲಪತಿ ಪೊ. ಅನಿಲಕುಮಾರ ಬಿಡವೆ, ಕುಲಸಚಿವೆ ಡಾ. ಲಕ್ಷ್ಮಿ ಪಾಟೀಲ ಮಾಕಾ, ನಿರ್ದೇಶಕ ಪೊ. ವಿ. ಡಿ. ಮೈತ್ರಿ, ಹಣಕಾಸು ಅಧಿಕಾರಿ ಡಾ. ಕಿರಣ್ ಮಾಕಾ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಕ್ರೀಡಾಕೂಟದ ಮೊದಲ ದಿನ ನಡೆದ ಮಹಿಳೆಯರ ಕಬಡ್ಡಿ ಪಂದ್ಯದಲ್ಲಿ ಕಂಪ್ಯೂಟರ್ ಸೈನ್ಸ್ ಇಂಜಿನಿಯರಿಂಗ್ (ಮಹಿಳೆಯರಿಗೆ ಮಾತ್ರ) ವಿಭಾಗವು ಬ್ಯಾಚುಲರ್ ಆಫ್ ಕಂಪ್ಯೂಟರ್ ಅಪ್ಲಿಕೇಷನ್ (ಸಹಶಿಕ್ಷಣ) ವಿಭಾಗದ ತಂಡವನ್ನು 13–12 ಅಂಕಗಳಿಂದ ಸೋಲಿಸಿ ಜಯಭೇರಿ ಬಾರಿಸಿತು. ಮೊದಲಾರ್ಧದಲ್ಲಿ 5–6 ಅಂಕಗಳಿಂದ ಹಿನ್ನಡೆ ಅನುಭವಿಸಿದ್ದ ಕಂಪ್ಯೂಟರ್ ಸೈನ್ಸ್ ಇಂಜಿನಿಯರಿಂಗ್ ವಿಭಾಗದ ವಿದ್ಯಾರ್ಥಿನಿಯರು ದ್ವಿತೀಯಾರ್ಧದಲ್ಲಿ ಉತ್ತಮ ಪ್ರದರ್ಶನ ನೀಡಿ ಎದುರಾಳಿ ತಂಡದ ಸವಾಲನ್ನು ಮೆಟ್ಟಿನಿಂತು ಗೆಲುವು ಸಾಧಿಸಿದರು.

ಮೂರು ದಿನಗಳ ಕ್ರೀಡಾಕೂಟದಲ್ಲಿ ಪುರುಷರು ಮತ್ತು ಮಹಿಳೆಯರ ಕ್ರಿಕೆಟ್, ಪುರುಷರು ಮತ್ತು ಮಹಿಳೆಯರ ಕಬಡ್ಡಿ, ಪುರುಷರ ವಾಲಿಬಾಲ್, ಮಹಿಳೆಯರ ಥ್ರೋಬಾಲ್, ಪುರುಷರು ಮತ್ತು ಮಹಿಳೆಯರ ಬ್ಯಾಡ್ಮಿಂಟನ್ ಹಾಗೂ ಅಥ್ಲೆಟಿಕ್ಸ್ ವಿಭಾಗದ 100, 200, 400 ಮತ್ತು 800 ಮೀಟರ್ ಓಟ, ಉದ್ದ ಜಿಗಿತ, ಎತ್ತರ ಜಿಗಿತ, ಡಿಸ್ಕಸ್ ಎಸೆತ ಮತ್ತು ಗುಂಡು ಎಸೆತ ಸೇರಿದಂತೆ ವಿವಿಧ ಸ್ಪರ್ಧೆಗಳು ನಡೆಯಲಿವೆ.

ನೂಲಿಗೆ ಚಂದಯ್ಯನವರ ಕೊಡುಗೆ ಅನನ್ಯ

ಕಲಬುರಗಿ: ಹನ್ನೆರಡನೇ ಶತಮಾನದಲ್ಲಿ ತಮ್ಮ ಭಕ್ತಿ, ಕಾಯಕ, ದಾಸೋಹ, ಅನುಭಾವ, ಸಮಾಜ ಸೇವೆಯ ಮೂಲಕ ಸಮಾಜ, ವಚನ ಸಾಹಿತ್ಯಕ್ಕೆ ನೂಲಿಗೆ ಚಂದಯ್ಯನವರು ನೀಡಿದ ಕೊಡುಗೆ ತುಂಬಾ ಅನನ್ಯವಾಗಿದೆ ಎಂದು ಉಪನ್ಯಾಸಕ, ಶರಣ ಚಿಂತಕ ಎಚ್.ಬಿ.ಪಾಟೀಲ ಹೇಳಿದರು.ನಗರದ ಆಳಂದ ರಸ್ತೆಯ ಖಾದ್ರಿ ಚೌಕ್‌ನ 'ಸಕ್ಸಸ್ ಕಂಪ್ಯೂಟರ ತರಬೇತಿ ಕೇಂದ್ರ'ದಲ್ಲಿ 'ಬಸವೇಶ್ವರ ಸಮಾಜ ಸೇವಾ ಬಳಗ'ದ ವತಿಯಿಂದ ಜರುಗಿದ 'ಶರಣ ನೂಲಿಗೆ ಚಂದಯ್ಯನವರ 919ನೇಜಯಂತಿ'ಯ ಕಾರ್ಯಕ್ರಮದಲ್ಲಿ ಭಾವಚಿತ್ರಕ್ಕೆ ಪುಷ್ಪ ನಮನಗಳನ್ನುಸಲ್ಲಿಸಿ ಅವರು ಮಾತನಾಡುತ್ತಿದ್ದರು.ಚಂದಯ್ಯನವರು ಅನುಭವ ಮಂಟಪದಲ್ಲಿ ಸಕ್ರಿಯವಾಗಿ ಭಾಗವಹಿಸಿ ಸಮಾಜದಲ್ಲಿ ಕಂಡುಬರುತ್ತಿದ್ದ ಸಮಸ್ಯೆಗಳಿಗೆ ಪರಿಹಾರವನ್ನುದೊರಕಿಸಿಕೊಡುವಲ್ಲಿ ನಿರಂತರವಾಗಿ ಪ್ರಯತ್ನಿಸುತ್ತಿದ್ದರು. ಅವರಲ್ಲಿರು ವಸಾಮಾಜಿಕ ಕಾಳಜಿ ಮರೆಯುವಂತಿಲ್ಲ. ನೂಲಿನ ಕಾಯಕ ಮಾಡುತ್ತಿದ್ದರು.

ಕಸವನ್ನು ರಸವಾಗಿಸುವ ಸಂತ

■ ಉದಯರಶ್ಮಿ ದಿನಪತ್ರಿಕೆ



ನಾವು ಆಶೀರ್ವಾದ,ಪೂಜೆ ಪ್ರವಚನ ಮಾಡುವ ಸ್ವಾಮೀಜಿಗಳನ್ನು ಮಠ, ಮಂದಿರ, ಮಸೀದಿಗಳಲ್ಲಿ, ಚರ್ಚುಗಳಲ್ಲಿ ಕಾಣುತ್ತೇವೆ. ಆದರೆ ಅಂದು ಸ್ವಚ್ಛ ಮಂಗಳೂರು ಅಭಿಯಾನದ ಮೂಲಕ, ದೇಶದ ಗಮನ ಸೆಳೆದಿದ್ದ, ಅಂದಿನ ಮಂಗಳೂರಿನ ರಾಮಕೃಷ್ಣ ಮಿಷನ್ ನ ಪೂಜ್ಯ ಶ್ರೀ ಏಕಫಮ್ಯಾನಂದಜಿ ಮಹಾರಾಜರು, ನಾಲ್ಕು ವರ್ಷದ ಹಿಂದೆ, ಈ ಪುಟ್ಟ ಘಟಕದಿಂದ ಪೂರೈಸಲು ಸಾಧ್ಯವಾಗುತ್ತಿಲ್ಲ.! " ಕಾಯಕದಲ್ಲಿ ನಿರತನಾದೊಡೆ ಶಿವ ಪೂಜೆಯನ್ನೂ ಮರೆಯಬೇಕು.." ಎನ್ನುವ

ನಮ್ಮ ಮುಖ್ಯಮಂತ್ರಿಗಳು ಜಪಾನಿನಲ್ಲಿ ಕಸ ಸಂಸ್ಕರಣ ಘಟಕ ನೋಡಿ ಬಂದಿದ್ದಾರೆ. ಪೂಜ್ಯರು ಸ್ಥಾಪಿಸಿರುವ ನಿಡಸೋಶಿಯ ಪುಟ್ಟ ಕಸ ಸಂಸ್ಕರಣಾ ಘಟಕವನ್ನೂ ಒಮ್ಮೆ ನೋಡಿ ಬೆಂಗಳೂರನ್ನು ಹಾಗೂ ಕರುನಾಡನ್ನು ಕಸಮುಕ್ತ, ಸ್ವಚ್ಛ ಸುಂದರ ನಾಡನ್ನಾಗಿ ರೂಪಿಸಲು ಪೂಜ್ಯರ ಮಾರ್ಗದರ್ಶನ ಪಡೆಯುವಂತಾಗಲಿ



ನಾಡಿನ ಪ್ರತಿಷ್ಠಿತ ಮಠಗಳಲ್ಲೊಂದಾದ, ಬೆಳಗಾವಿ ಜಿಲ್ಲೆಯ ನಿಡಸೋಶಿಯ ಸಂಸ್ಥಾನ ಮಠದ ನಿಯೋಜಿತ ಜಗದ್ಗುರುಗಳಾಗಿ ಇಂದು



ಪೂಜ್ಯಶ್ರೀ ನಿಜಲಿಂಗೇಶ್ವರ ಮಹಾಸ್ವಾಮಿಗಳು ಎಂದು ಕರೆಯಲ್ಪಡುತ್ತಿರುವ ಅವರು, ಶ್ರೀ ಮಠದಲ್ಲಿ ಹಸಿ ಕಸ, ವನ ಕಸದ ಸಂಸ್ಕರಣಾ ಘಟಕವನ್ನು ಸ್ಥಾಪಿಸಿ, ಶ್ರೀ ಮಠದ 75 ಎಕರೆ ವಿಶಾಲ ಪ್ರದೇಶದಲ್ಲಿ ಹರಡಿಕೊಂಡಿರುವ, ಅವರ ಶಿಕ್ಷಣ ಸಂಸ್ಥೆಯ ಆವರಣದಲ್ಲಿರುವ ಹಸಿ ಕಸ, ವನ ಕಸವನ್ನು ಸಂಸ್ಕರಿಸಿ, ಹಸಿ ಕಸದಿಂದ ಉತ್ಪಾದನೆಯಾಗುತ್ತಿರುವ ಸ್ಲರಿ ಅನ್ನು, ವೈಜ್ಞಾನಿಕವಾಗಿ ಪ್ರಯೋಗಕ್ಕೊಳಪಡಿಸಿ, ವೈಜ್ಞಾನಿಕವಾದ ಹೊಸ ಹೊಸ ಪ್ರಯೋಗಗಳ ಮೂಲಕ ಇಂದು ಯಶಸ್ವಿಯಾಗಿರುವ ಪೂಜ್ಯರು, ಆ ಭಾಗದ ರೈತರಿಗೆ ಹಸಿ ಕಸದಿಂದ ತಯಾರಿಸಿದ ಸ್ಲರಿಯನ್ನು ನೀಡುವುದರ ಮೂಲಕ, ರೈತರು ತಾವು ಬೆಳೆಯುತ್ತಿರುವ ಬೆಳೆಗಳಲ್ಲಿ ಗಣನೀಯ ಪ್ರಮಾಣದ ಇಳುವರಿ ಹೆಚ್ಚಿಸಿಕೊಳ್ಳಲು ಕಾರಣರಾಗಿದ್ದಾರೆ. ನಾನು ನಿಡಸೋಶಿಯ ಅನಿಲ್ ಎಂಬ ರೈತನ ತೋಟಕ್ಕೆ ಭೇಟಿಕೊಟ್ಟಿದ್ದೆ. ಆತ ತನ್ನನ್ನು ಒಳಗೊಂಡಂತೆ ಇಲ್ಲಿ ಸಾವಿರಾರು ಜನ ರೈತರು ಹೇಗೆ ಸ್ಲರಿಯನ್ನು ಬೆಳೆಗಳಿಗೆ ಸಿಂಪಡಿಸಿ ಗುರುಗಳ ಮಾರ್ಗದರ್ಶನದಲ್ಲಿ ಯಶಸ್ವಿಯಾಗಿರುವ ಕತೆಯನ್ನು ಹಾಗೂ ತಾನೇ ಸ್ವತಃ ಅದ್ಭುತವಾದ ಬೆಳೆಯನ್ನು ನಮಗೆ ತೋರಿಸಿ ತನ್ನ ಅನುಭವ ಹಂಚಿಕೊಂಡನು.

ಇನ್ನೊಂದು ಅತ್ಯಂತ ಆಶ್ಚರ್ಯದ ಸಂಗತಿ ಎಂದರೆ, ಗುರುಗಳು ತಯಾರಿಸಿದ ಸ್ಲರಿಗೆ ರೈತರು 15 ದಿನ ಮುಂಚಿತವಾಗಿ ಫ್ರೀ ಬುಕಿಂಗ್ ಮಾಡುತ್ತಾರೆ, ರೈತರೆಲ್ಲರ ಬೇಡಿಕೆಯನ್ನು ಶರಣರ ಸದಾಶಯದಂತೆ ಆ ಭಾಗದ ಅನ್ನದಾತರ ಸೇವೆಯಲ್ಲಿ ಸಾರ್ಥಕ್ಯ ಕಾಣುತ್ತಿರುವುದು ನಿಜಕ್ಕೂ ಅಭಿಮಾನದ ಸಂಗತಿಯಾಗಿದೆ.

ದೇಶ–ವಿದೇಶಗಳ ಗಣ್ಯರ ಭೇಟಿ

ಪೂಜ್ಯರು ಸ್ಥಾಪಿಸಿರುವ ಕಸ ಸಂಸ್ಕರಣಾ ಘಟಕಕ್ಕೆದೇಶವಿದೇಶದಿಂದಅನೇಕಗಣ್ಯರುಭೇಟಿ ನೀಡಿ ಅದರ ಪ್ರಯೋಜನ ಪಡೆಯುತ್ತಿದ್ದಾರೆ. ನಾಡಿನ ಪ್ರತಿಷ್ಠಿತ ಕೆಎಸ್ ಸಂಸ್ಥೆಯ ಬೆಳಗಾವಿ ಆವರಣದಲ್ಲಿ ಪೂಜ್ಯರು ಕಸವನ್ನ ರಸ ವಾಗಿಸುವ, ವಿನೂತನ ಯೋಜನೆಯನ್ನು ಪದ್ಮಶ್ರೀ ಡಾ. ಪ್ರಭಾಕರ ಕೋರೆಯವರ ವಿನಂತಿಯ ಮೇರೆಗೆ ನೂತನ ಯೋಜನೆಯನ್ನು ಕೈಗೆತ್ತಿಕೊಂಡಿದ್ದಾರೆ. ಉಪಯೋಗವಿಲ್ಲವೆಂದು ಬಿಸಾಕುವ ಕಸದಲ್ಲಿ, ರಸವನ್ನು,ಹತ್ತು ಹಲವು ಅವಕಾಶಗಳನ್ನು ಸೃಷ್ಟಿಸಿ ನೂರಾರು ಉದ್ಯೋಗಗಳನ್ನ ಸೃಷ್ಟಿಸಿರುವ, ಆ ಭಾಗದ ರೈತರ ಬಾಳಿಗೆ ಬೆಳಕಾಗುತ್ತಿರುವ, ಸ್ವಚ್ಛ ಸಂಕೇಶ್ವರ ಅಭಿಯಾನದ ಮೂಲಕ ನಾಡಿನ ಗಮನ ಸೆಳೆದಿರುವ, ಕಸದೊಳಗೆ ಹೊಸ ಕನಸುಗಳನ್ನು ಕಟ್ಟಿಕೊಡುತ್ತಿರುವ ಪೂಜ್ಯರ ಮಾರ್ಗದರ್ಶನದಿಂದ ನಮ್ಮ ಪರಿಸರ ಸ್ವಚ್ಛತೆಯಿಂದ ಕಂಗೊಳಿಸುವಂತಾಗಲಿ, ಮುಖ್ಯಮಂತ್ರಿಗಳು ಜಪಾನಿನಲ್ಲಿ ಕಸ ಸಂಸ್ಕರಣ ಘಟಕ ನೋಡಿ ಬಂದಿದ್ದಾರೆ, ಪೂಜ್ಯರು ಸ್ಥಾಪಿಸಿರುವ ನಿಡಸೋಶಿಯ ಪುಟ್ಟ ಕಸ ಸಂಸ್ಕರಣಾ ಘಟಕವನ್ನೂ, ಒಮ್ಮೆ ನೋಡಿ ಬೆಂಗಳೂರನ್ನು,ಹಾಗೂ ಕರುನಾಡನ್ನು ಕಸಮುಕ್ತ, ಸ್ವಚ್ಛ ಸುಂದರ ನಾಡನ್ನಾಗಿ ರೂಪಿಸಲು ಪೂಜ್ಯರ ಮಾರ್ಗದರ್ಶನ ಪಡೆಯುವಂತಾಗಲಿ ಎಂದು ಆಶಿಸುತ್ತೇನೆ. ಸದ್ದು ಗದ್ದಲವಿಲ್ಲದೆ, ಪರಿಸರವನ್ನು ಉಳಿಸುವ ಕೆಲಸದಲ್ಲಿ ನಿರತರಾಗಿರುವ,ಕಸದಲ್ಲಿ ರಸ ತೆಗೆಯುತ್ತಿರುವ ಸಂತನಿಗೆ ನನ್ನ ಶತ ಕೋಟಿ ಪ್ರಣಾಮಗಳು.



– ಸಂಗಮೇಶ ಬಬಲೇಶ್ವರ.
ನಿಕಟಪೂರ್ವ ಅಧ್ಯಕ್ಷರು
ಕರ್ನಾಟಕ ಬಾಲವಿಕಾಸ ಅಕಾಡೆಮಿ
ವಿಜಯಪುರ

ಗುರುನಾನಕರ ಆಧ್ಯಾತ್ಮಿಕ, ಸಾಮಾಜಿಕ ಕೊಡುಗೆ ಅನನ್ಯ



ಕಲಬುರಗಿ : ಗುರುನಾನಕರು ಸಿಖ್ ಧರ್ಮದ ಸ್ಥಾಪಕರು. ದೇವರು ಒಬ್ಬನೇ ಮತ್ತು ಸತ್ಯದ ತಳಹದಿಯ ಮೇಲೆ ಸಿಖ್ ಧರ್ಮವನ್ನು ಸ್ಥಾಪಿಸಿದರು. ದೇವರ ನಾಮಸ್ಮರಣೆ, ಕಿರತ್ ಪ್ರಾಮಾಣಿಕ ದುಡಿಮೆ ಮತ್ತು ಗಳಿಸಿದ್ದನ್ನು ಹಂಚಿ ತಿನ್ನುವುದು ಎಂಬ ಸರಳ ಜೀವನ ಮಂತ್ರಗಳನ್ನು ಬೋಧಿಸಿದರು. ಅವರು ಆದ್ಯಾತ್ಮಿಕ ಮತ್ತು ಸಾಮಾಜಿಕವಾಗಿ ಅನನ್ಯ ಕೊಡುಗೆಯನ್ನು ನೀಡಿದ್ದಾರೆ ಎಂದು ಉಪನ್ಯಾಸಕ ಎಚ್.ಬಿ.ಪಾಟೀಲ್ ಹೇಳಿದರು. ನಗರದ ಖಾದ್ರಿ ಚೌಕ್ ನಲ್ಲಿನ 'ಸಕ್ಸಸ್ ಕಂಪ್ಯೂಟರ್ ತರಬೇತಿ ಕೇಂದ್ರ'ದಲ್ಲಿ 'ಬಸವೇಶ್ವರ ಸಮಾಜ ಸೇವಾ ಬಳಗ'ದ ವತಿಯಿಂದ ಜರುಗಿದ "ಗುರುನಾನಕರ ಜಯಂತಿ"ಯ ಕಾರ್ಯಕ್ರಮದಲ್ಲಿ ಅವರು ಮಾತನಾಡುತ್ತಿದ್ದರು.

ಗುರುನಾನಕರು ಮೂಢನಂಬಿಕೆಗಳನ್ನು ವಿರೋಧಿಸಿದರು. ಮೂರ್ತಿ ಪೂಜೆ, ಅಂಧಶ್ರದ್ಧೆ ಮತ್ತು ಅರ್ಥಹೀನ ಧಾರ್ಮಿಕ ಆಚರಣೆಗಳನ್ನು ತಿರಸ್ಕರಿಸಿ ಸರಳ ಭಕ್ತಿ ಮಾರ್ಗವನ್ನು ತೋರಿಸಿದರು. ಜಾತಿ, ಧರ್ಮ, ಬಡವ–ಬಲ್ಲಿದ ಎಂಬ ಭೇದವಿಲ್ಲದೆ ಎಲ್ಲರೂ ಒಟ್ಟಿಗೆ ಕುಳಿತು ಊಟ ಮಾಡುವ 'ಲಂಗರ್' ವ್ಯವಸ್ಥೆಯನ್ನು ಆರಂಭಿಸಿದರು. ಸಮಾನತೆ ಮತ್ತು ಜಾತಿ ನಿರ್ಮೂಲನೆ. ದೇವರ ದೃಷ್ಟಿಯಲ್ಲಿ ಎಲ್ಲಾ ಮಾನವರೂ ಸಮಾನರು ಎಂದು ಸಾರುವ ಮೂಲಕ ಜಾತಿ ವ್ಯವಸ್ಥೆ ಮತ್ತು ಅಸ್ಪೃಶ್ಯತೆಯನ್ನು ಕಟುವಾಗಿ ವಿರೋಧಿಸಿದರು. ಮಹಿಳೆಯರಿಗೆ ಸಮಾಜದಲ್ಲಿ ಗೌರವ ಮತ್ತು ಸಮಾನ ಸ್ಥಾನಮಾನ ನೀಡಬೇಕೆಂದು ಪ್ರತಿಪಾದಿಸಿದರು ಹಾಗೂ ಹೆಣ್ಣು ಭ್ರೂಣಹತ್ಯೆಯಂತಹ ಅನಿಷ್ಟ ಪದ್ಧತಿಗಳನ್ನು ಖಂಡಿಸಿದರು. ಮಾನವೀಯತೆ ಮತ್ತು ಇತರರಿಗೆ ನಿಸ್ವಾರ್ಥ ಸೇವೆ ಸಲ್ಲಿಸುವುದೇ ನಿಜವಾದ ಧರ್ಮ ಎಂದು ತಿಳಿಸಿದರು ಎಂದರು. ಕಾರ್ಯಕ್ರಮದಲ್ಲಿ ಸಂಸ್ಥೆಯ ಅಸ್ಲಾಂ ಶೇಖ್, ಸಮಾಜ ಸೇವಕ ಶಿವಯೋಗೆಪ್ಪಾ ಎಸ್. ಬಿರಾದಾರ ಹಾಗೂ ವಿದ್ಯಾರ್ಥಿಗಳು ಇದ್ದರು.

ಎಸ್‌ಬಿಆರ್ ಕಾಲೇಜಿನ ರಸಾಯನಶಾಸ್ತ್ರ ಉಪನ್ಯಾಸಕ ಲಕ್ಷ್ಮೀಪುತ್ರ ಕುರಕೋಟಿಗೆ ಪಿಎಚ್‌ಡಿ



ಕಲಬುರಗಿ: ನಗರದ ಪ್ರತಿಷ್ಠಿತ ಶರಣಬಸವೇಶ್ವರ ವಿದ್ಯಾವರ್ಧಕ ಸಂಘದ ಶರಣಬಸವೇಶ್ವರ ವಸತಿ ಸಂಯುಕ್ತ ಪದವಿ ಪೂರ್ವ ಕಾಲೇಜಿನ (ಎಸ್‌ಬಿಆರ್) ರಸಾಯನಶಾಸ್ತ್ರ ಉಪನ್ಯಾಸಕರಾದ ಶ್ರೀ ಲಕ್ಷ್ಮೀಪುತ್ರ ಆರ್. ಕುರಕೋಟಿ ಅವರು ಬೆಂಗಳೂರಿನ ರೇವಾ ವಿಶ್ವವಿದ್ಯಾಲಯದಿಂದ ರಸಾಯನಶಾಸ್ತ್ರ ವಿಷಯದಲ್ಲಿ ಪಿಎಚ್.ಡಿ. (ಡಾಕ್ಟರೇಟ್) ಪದವಿ ಪಡೆದಿದ್ದಾರೆ.

ಇವರು "Degradation of Dyes Using Photocatalysts" ಎಂಬ ವಿಷಯದ ಕುರಿತು ಸಂಶೋಧನೆ ನಡೆಸಿ ಡಾಕ್ಟರೇಟ್ ಪದವಿಗೆ ಭಾಜನರಾಗಿದ್ದಾರೆ. ಇವರ ಸಂಶೋಧನೆಯು ಬಣ್ಣದ ತ್ಯಾಜ್ಯಗಳಿಂದ ಉಂಟಾಗುವ ಪರಿಸರ ಮಾಲಿನ್ಯವನ್ನು ನಿಯಂತ್ರಿಸುವ ಹಾಗೂ ಪರಿಸರ ಸಂರಕ್ಷಣೆಗೆ ನೆರವಾಗುವ ನಿಟ್ಟಿನಲ್ಲಿ ಮಹತ್ವದ ಕೊಡುಗೆಯಾಗಿದೆ.ಬೆಂಗಳೂರಿನಲ್ಲಿ ನಡೆದ ಪದವಿ ಪ್ರದಾನ ಸಮಾರಂಭದಲ್ಲಿ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ (ಇಸ್ರೋ) ಅಧ್ಯಕ್ಷರಾದ ಡಾ. ವಿ. ನಾರಾಯಣನ್ ಅವರು ಶ್ರೀ ಲಕ್ಷ್ಮೀಪುತ್ರ ಆರ್. ಕುರಕೋಟಿ ಅವರಿಗೆ ಪಿಎಚ್.ಡಿ. ಪದವಿಯನ್ನು ಪ್ರದಾನ ಮಾಡಿದರು.

ಶ್ರೀ ಕುರಕೋಟಿ ಅವರ ಈ ಸಾಧನೆಯು ಅವರ ನಿರಂತರ ಪರಿಶ್ರಮ, ಸಂಶೋಧನಾ ಆಸಕ್ತಿ ಹಾಗೂ ಶೈಕ್ಷಣಿಕ ಕ್ಷೇತ್ರದ ಬಗೆಗಿನ ಸಮರ್ಪಣಾ ಮನೋಭಾವಕ್ಕೆ ಸಂದ ಗೌರವವಾಗಿದೆ.ಈ ಶೈಕ್ಷಣಿಕ ಸಾಧನೆಗೆ ಶರಣಬಸವೇಶ್ವರ ವಿದ್ಯಾವರ್ಧಕ ಸಂಘದ ಆಡಳಿತ ಮಂಡಳಿ, ಕಾಲೇಜಿನ ಪ್ರಾಚಾರ್ಯರು, ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ಹರ್ಷ ವ್ಯಕ್ತಪಡಿಸಿ, ಶ್ರೀ ಲಕ್ಷ್ಮೀಪುತ್ರ ಆರ್. ಕುರಕೋಟಿ ಅವರಿಗೆ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸಿದ್ದಾರೆ.

ರಾತ್ರಿ ಅಪಘಾತಗಳಿಗೆ ಬ್ರೇಕ್ ಹಾಕಲು ಅಫಜಲಪುರ ಪೊಲೀಸರು ಅಖಾಡಕ್ಕೆ

ಅಫಜಲಪುರ: ಕಬ್ಬು ಸಾಗಿಸುವ ಟ್ರ್ಯಾಕ್ಟರಗಳಿಂದ ರಾತ್ರಿ ವೇಳೆ ಸಂಭವಿಸಬಹುದಾದರಸ್ತೆಅಪಘಾತಗಳನ್ನು ತಡೆಗಟ್ಟಲು ಅಫಜಲಪುರ ಪೊಲೀಸ್ ಇಲಾಖೆ ಕಟ್ಟುನಿಟ್ಟಿನ ಕ್ರಮಕ್ಕೆ ಮುಂದಾಗಿದೆ. ಟ್ರ್ಯಾಕ್ಟರ್ ಚಾಲಕರು ಹಾಗೂ ಮಾಲೀಕರಿಗೆ ರಸ್ತೆ ಸುರಕ್ಷತೆಯ ಕುರಿತು ಜಾಗೃತಿ ಮೂಡಿಸುವುದರ ಜೊತೆಗೆ, ನಿಯಮ ಉಲ್ಲಂಘಿಸುವ ವಾಹನಗಳಿಗೆ ಸ್ಥಳದಲ್ಲೇ ರಿಫ್ಲೆಕ್ಟರ್ ಟೇಪ್ ಅಳವಡಿಸಿ ಎಚ್ಚರಿಕೆ ನೀಡುವ ಕಾರ್ಯಕ್ಕೆ ಪೊಲೀಸರು ಮುಂದಾಗಿದ್ದಾರೆ.

ಕಬ್ಬು ತುಂಬಿದ ಟ್ರ್ಯಾಕ್ಟರ್ ಟ್ರಾಲಿಗಳು ರಾತ್ರಿ ವೇಳೆ ಹಿಂಬದಿಯಿಂದ ಬರುವ ವಾಹನಗಳ ಚಾಲಕರಿಗೆ ಸರಿಯಾಗಿ ಗೋಚರಿಸದೆ ಅಪಘಾತಗಳಿಗೆ ಕಾರಣವಾಗುತ್ತಿವೆ. ಅದರಲ್ಲೂ ಟ್ರಾಲಿಗಳ ಹಿಂಭಾಗದಲ್ಲಿ ಸಮರ್ಪಕ ಲೈಟ್, ಇಂಡಿಕೇಟರ್ ಹಾಗೂ ರಿಫ್ಲೆಕ್ಟಗಳಿಲ್ಲದಿರುವುದು ಅಪಾಯವನ್ನು ಮತ್ತಷ್ಟು ಹೆಚ್ಚಿಸುತ್ತಿದೆ.

ಈ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿರುವ ಅಫಜಲಪುರ ಪೊಲೀಸ್ ಠಾಣೆಯ ಪಿಎಸ್‌ಐ ವಿಜಯಕುಮಾರ ನಾಯ್ಕ್ ಅವರು ಖುದ್ದಾಗಿ ಸ್ಥಳಕ್ಕೆ ತೆರಳಿ ಟ್ರ್ಯಾಕ್ಟರ್ ಚಾಲಕರು ಮತ್ತು ಮಾಲೀಕರಿಗೆ ರಸ್ತೆ ಸುರಕ್ಷತಾ ನಿಯಮಗಳ ಬಗ್ಗೆ ತಿಳಿವಳಿಕೆ ನೀಡುತ್ತಿದ್ದಾರೆ. ನಿಯಮ ಪಾಲಿಸದ ಕೆಲವು ಟ್ರ್ಯಾಕ್ಟರ್ ಟ್ರಾಲಿಗಳ ಹಿಂಭಾಗ ಹಾಗೂ ಬದಿಗಳಿಗೆ ಸ್ವತಃ ಕೆಂಪು ಬಣ್ಣದ ರಿಫ್ಲೆಕ್ಟರ್ ಟೇಪ್ ಅಳವಡಿಸುವ ಮೂಲಕ ಚಾಲಕರಲ್ಲಿ ಜಾಗೃತಿ ಮೂಡಿಸುತ್ತಿದ್ದಾರೆ.

ಇದೇ ವೇಳೆ ಟ್ರ್ಯಾಕ್ಟರಗಳಿಗೆ ಕಡ್ಡಾಯವಾಗಿ ಸಮರ್ಪಕ ಲೈಟ್ ಹಾಗೂ ಇಂಡಿಕೇಟನಗಳನ್ನು ಅಳವಡಿಸಬೇಕು. ರಸ್ತೆ ಬದಿಯಲ್ಲಿ ಅಡ್ಡಾದಿಡ್ಡಿಯಾಗಿ ವಾಹನ ನಿಲ್ಲಿಸಬಾರದು. ಸಾರ್ವಜನಿಕರಿಗೆ ತೊಂದರೆಯಾಗುವಂತೆ ಕರ್ಕಶ ಶಬ್ದದ ಡಿಜೆ ಸೌಂಡ್ ಸಿಸ್ಟಗಳನ್ನು ಬಳಸಬಾರದು ಎಂದು ಖಡಕ್ ಸೂಚನೆ ನೀಡಿದ್ದಾರೆ.



ರೈತರ ಕೃಷಿ ಚಟುವಟಿಕೆಗಳಿಗೆ ಟ್ರ್ಯಾಕ್ಟರಗಳು ಅತ್ಯಗತ್ಯವಾದರೂ, ಸಾರ್ವಜನಿಕರ ಜೀವಕ್ಕೆ ಅಪಾಯವಾಗುವ ರೀತಿಯಲ್ಲಿ ವಾಹನಗಳನ್ನು ಚಲಾಯಿಸುವುದು ಸರಿಯಲ್ಲ. ರೈತರ ಜೀವದ ಜೊತೆಗೆ ರಸ್ತೆ ಮೇಲೆ ಸಂಚರಿಸುವ ಪ್ರತಿಯೊಬ್ಬರ ಸುರಕ್ಷತೆಯೂ ಮುಖ್ಯ. ಆದ್ದರಿಂದ ಟ್ರ್ಯಾಕ್ಟರ್ ಚಾಲಕರು ಮತ್ತು ಮಾಲೀಕರು ಪೊಲೀಸ್ ಇಲಾಖೆಯ ಸೂಚನೆಗ

ಸೋಲಿಲ್ಲದ ಬದುಕಿನ ರಹಸ್ಯವೇನು ಗೊತ್ತೇ?

■ ಉದಯರಶ್ಮಿ ದಿನಪತ್ರಿಕೆ

"ಬದುಕಿನ ಕತ್ತಲನ್ನು ಕಳೆಯಲು ನೂರು ದೀಪಗಳು ಬೇಕಿಲ್ಲ, ನಮ್ಮೊಳಗಿನ ಒಂದೇ ಒಂದು ಸಕಾರಾತ್ಮಕ ಆಲೋಚನೆಯ ಕಿಡಿ ಸಾಕು."

ನಮ್ಮ ದೈನಂದಿನ ಜೀವನದಲ್ಲಿ ನಾವು ಹಲವಾರು ಸವಾಲುಗಳನ್ನು, ಏಳುಬೀಳುಗಳನ್ನು ಎದುರಿಸುತ್ತೇವೆ. ಪ್ರತಿಯೊಬ್ಬರಿಗೂ ಜೀವನದಲ್ಲಿ ಯಶಸ್ಸು ಗಳಿಸಬೇಕು, ಎಲ್ಲರ ಮೆಚ್ಚುಗೆಗೆ ಪಾತ್ರರಾಗಬೇಕು ಎಂಬ ಆಸೆ ಇರುತ್ತದೆ. ಆದರೆ, ಬದುಕಿನ ಓಟದಲ್ಲಿ ನಾವು ಕೇವಲ ಹಣ, ಅಧಿಕಾರ ಅಥವಾ ಹೊರಗಿನ ವಸ್ತುಗಳ ಹಿಂದೆ ಓಡುತ್ತೇವೆಯೇ ಹೊರತು, ನಮ್ಮ ವ್ಯಕ್ತಿತ್ವವನ್ನು ಸುಂದರವಾಗಿಸುವ ನಿಜವಾದ ಗುಣಗಳನ್ನು ಮರೆತುಬಿಡುತ್ತೇವೆ. "ತಾಳ್ಮೆ" ಎಂಬ "ಆಯುಧ", "ಮೌನ" ಎಂಬ "ಕಿರೀಟ", "ನಗು" ಎಂಬ "ಒಡವೆ" ಧರಿಸಿದವರಿಗೆ ಜೀವನದಲ್ಲಿ ಯಾವತ್ತೂ "ಸೋಲೇ ಇಲ್ಲ"! ಈ ಮೂರು ಸರಳ ಗುಣಗಳು ನಮ್ಮ ಬದುಕಿನ ದಿಕ್ಕನ್ನೇ ಬದಲಿಸುವ ಅದ್ಭುತ ಶಕ್ತಿಯನ್ನು ಹೊಂದಿವೆ. ಇವುಗಳನ್ನು ನಮ್ಮದಾಗಿಸಿಕೊಂಡರೆ ಎಂತಹ ಕಠಿಣ ಪರಿಸ್ಥಿತಿಯನ್ನೂ ನಾವು ಸುಲಭವಾಗಿ ಗೆಲ್ಲಬಹುದು.

ಈ ಸತ್ಯವನ್ನು ಮನವರಿಕೆ ಮಾಡಿಕೊಡುವ ಒಂದು ಅರ್ಥಪೂರ್ಣ ನಿದರ್ಶನ ಪುರಾತನ ತಮಿಳು ಸಾಹಿತ್ಯದಲ್ಲಿದೆ. ಒಮ್ಮೆ ಒಬ್ಬ ಗುರುಗಳು ತಮ್ಮ ಶಿಷ್ಯನಿಗೆ ಬದುಕಿನ ಪಾಠ ಕಲಿಸಲು ಒಂದು ಗಾಜಿನ ಲೋಟದಲ್ಲಿ ನೀರು ತರಲು ಹೇಳಿದರು. ನಂತರ ಆ ನೀರಿಗೆ ಒಂದು ಹಿಡಿ ಉಪ್ಪನ್ನು ಹಾಕಿ ಕುಡಿಯಲು ತಿಳಿಸಿದರು. ಶಿಷ್ಯನು ನೀರನ್ನು ಕುಡಿದು, "ಗುರುಗಳೇ, ಇದು ತುಂಬಾ ಉಪ್ಪಾಗಿದೆ, ಕುಡಿಯಲು ಸಾಧ್ಯವಿಲ್ಲ" ಎಂದನು. ಆಗ ಗುರುಗಳು ಅವನನ್ನು ಪಕ್ಕದಲ್ಲಿದ್ದ ದೊಡ್ಡ ಕೆರೆಯ ಬಳಿಗೆ ಕರೆದೊಯ್ದರು. ಅಲ್ಲಿಯೂ ಒಂದು ಹಿಡಿ ಉಪ್ಪನ್ನು ಕೆರೆಗೆ ಹಾಕಿ, ಈಗ ನೀರನ್ನು ಕುಡಿಯಲು ಹೇಳಿದರು. ಶಿಷ್ಯನು ನೀರನ್ನು ಕುಡಿದು, "ಈಗ ನೀರು ತುಂಬಾ ಸಿಹಿಯಾಗಿದೆ" ಎಂದನು. ಆಗ ಗುರುಗಳು ನಗುತ್ತಾ, "ನೋಡು ಮಗು, ಉಪ್ಪಿನ ಪ್ರಮಾಣ ಒಂದೇ ಆಗಿತ್ತು. ಆದರೆ ಅದನ್ನು ಹಾಕಿದ ಪಾತ್ರೆಯ ಗಾತ್ರ ಬದಲಾಗಿತ್ತು. ನಮ್ಮ ಜೀವನದ ಕಷ್ಟಗಳೂ ಆ ಉಪ್ಪಿನಂತೆಯೇ. ನಮ್ಮ ಮನಸ್ಸು ಗಾಜಿನ ಲೋಟದಂತೆ ಸಣ್ಣದಾಗಿದ್ದರೆ ನೋವುಗಳು ಭಾರವೆನಿಸುತ್ತವೆ. ಅದೇ ನಮ್ಮ ಮನಸ್ಸು ಕೆರೆಯಂತೆ ವಿಶಾಲವಾಗಿದ್ದರೆ, ತಾಳ್ಮೆ ಮತ್ತು ಮೌನದಿಂದ ಎಂತಹ ಸಂಕಷ್ಟವನ್ನೂ ನಾವು ನಗುತ್ತಲೇ



ಕರಗಿಸಬಹುದು" ಎಂದರು.

ತಾಳ್ಮೆ, ಮೌನ ಮತ್ತು ನಗುವಿನ ಮೂಲಕ ಬದುಕು ಗೆಲ್ಲುವ ಸೂತ್ರಗಳು

ಈormulas to Win Life Through Patience, Silence, and a Smile)

ತಾಳ್ಮೆಯೇ ಪರಮ ಆಯುಧ (Patience is the Ultimate Weapon)

ಜೀವನದಲ್ಲಿ ಯಾವುದೇ ಕೆಲಸ ತಕ್ಷಣಕ್ಕೆ ಫಲ ನೀಡುವುದಿಲ್ಲ. ಬೀಜವೊಂದು ಮರವಾಗಲು ಸಮಯ ಬೇಕಾಗುತ್ತದೆ. ಹಾಗೆಯೇ ನಮ್ಮ ಪ್ರಯತ್ನಗಳಿಗೆ ಪ್ರತಿಫಲ ಸಿಗಲು ತಾಳ್ಮೆ ಅತ್ಯಗತ್ಯ. ಚೀನಾದ ಪ್ರಸಿದ್ಧ ತತ್ವಜ್ಞಾನಿ ಕನ್‌ಫ್ಯೂಷಿಯಸ್ ಹೇಳುವಂತೆ, "ನೀವು ಎಷ್ಟು



ನಿಧಾನವಾಗಿ ನಡೆಯುತ್ತೀರಿ ಎಂಬುದು ಮುಖ್ಯವಲ್ಲ, ಆದರೆ ನೀವು ನಿಲ್ಲದೆ ಮುಂದೆ ಸಾಗುತ್ತಿರುವುದು ಮುಖ್ಯ." ಕಷ್ಟದ ಸಮಯದಲ್ಲಿ ಶಾಂತವಾಗಿ ಕಾಯುವ ಗುಣವನ್ನು ಬೆಳೆಸಿಕೊಂಡರೆ, ಕಾಲವೇ ನಮಗೆ ಸರಿಯಾದ ದಾರಿಯನ್ನು ತೋರಿಸುತ್ತದೆ. ಇಂಗ್ಲಿಷ್‌ನಲ್ಲಿ ಒಂದು ಅರ್ಥಪೂರ್ಣ ನುಡಿಯಿದೆ, "Patience is bitter, but its fruit is sweet" (ತಾಳ್ಮೆ ಕಹಿಯಾಗಿರುತ್ತದೆ, ಆದರೆ ಅದರ ಫಲ ಸಿಹಿಯಾಗಿರುತ್ತದೆ). ತಾಳ್ಮೆ ಎಂಬುದು ದುರ್ಬಲರ ಲಕ್ಷಣವಲ್ಲ, ಅದು ಬಲಿಷ್ಠರ ಅತಿದೊಡ್ಡ ಶಕ್ತಿ.

ಮೌನದ ಶಕ್ತಿಯನ್ನು ಅರಿಯಿರಿ (Realize the Power of Silence)

ನಾವು ಮಾತನಾಡುವುದಕ್ಕಿಂತ ಹೆಚ್ಚಾಗಿ ಕೇಳಿಸಿಕೊಳ್ಳುವುದನ್ನು ಅಭ್ಯಾಸ ಮಾಡಿಕೊಳ್ಳಬೇಕು. ಅನಾವಶ್ಯಕ ಮಾತುಗಳು ನಮ್ಮ ಶಕ್ತಿಯನ್ನು ವ್ಯರ್ಥ ಮಾಡುವುದಲ್ಲದೆ, ಸಂಬಂಧಗಳಲ್ಲಿ ಬಿರುಕು ಮೂಡಿಸುತ್ತವೆ. ಚೀನಾದ ಮಹಾನ್ ಚಿಂತಕ ಲಾವೋ ತ್ಸು ಅವರ ಮಾತಿನಂತೆ, "ತಿಳಿದಿರುವವನು ಮಾತನಾಡುವುದಿಲ್ಲ, ಮಾತನಾಡುವವನಿಗೆ ತಿಳಿದಿರುವುದಿಲ್ಲ." ಮೌನವು ನಮ್ಮ ಮನಸ್ಸನ್ನು ಶಾಂತಗೊಳಿಸುತ್ತದೆ ಮತ್ತು ಆಳವಾಗಿ ಆಲೋಚಿಸಲು ಅವಕಾಶ ನೀಡುತ್ತದೆ. ಇಂಗ್ಲಿಷ್‌ನ ಜನಪ್ರಿಯ ಮಾತೊಂದರಂತೆ, "Silence is the best reply to a fool" (ಮೂರ್ಖನಿಗೆ ಮೌನವೇ ಅತ್ಯುತ್ತಮ ಉತ್ತರ). ಕೋಪ ಬಂದಾಗ ಮೌನವಾಗಿದ್ದರೆ, ಮುಂದೆ ಆಗಬಹುದಾದ ದೊಡ್ಡ ಅನಾಹುತಗಳನ್ನು ನಾವು ತಪ್ಪಿಸಬಹುದು.

ನಗುವೇ ನಿಜವಾದ ಒಡವೆ (A Smile is the True Ornament)

ಮುಖದ ಮೇಲಿನ ಒಂದು ಸಣ್ಣ ನಗು ಎಂತಹ ಕಠಿಣ ಹೃದಯವನ್ನೂ ಕರಗಿಸಬಲ್ಲದು. ನಾವು ಎಷ್ಟೇ ಬೆಲೆಬಾಳುವ ಆಭರಣಗಳನ್ನು ಧರಿಸಿದರೂ, ಮುಖದಲ್ಲಿ ನಗುವಿಲ್ಲದಿದ್ದರೆ ಅವೆಲ್ಲವೂ ವ್ಯರ್ಥ. ನಗು ನಮ್ಮ ಒತ್ತಡವನ್ನು ಕಡಿಮೆ ಮಾಡಿ, ಸುತ್ತಮುತ್ತಲಿನ ವಾತಾವರಣವನ್ನು ಉಲ್ಲಾಸಮಯವಾಗಿ ಇಡುತ್ತದೆ. ಇಂಗ್ಲಿಷ್‌ನಲ್ಲಿ ಹೇಳುವಂತೆ, "A smile is the shortest distance between two people" (ಇಬ್ಬರು ವ್ಯಕ್ತಿಗಳ ನಡುವಿನ ಅತ್ಯಂತ ಕಡಿಮೆ ಅಂತರವೆಂದರೆ ಅದು ನಗು). ಕಷ್ಟಗಳು ಬಂದಾಗ ಅಳುತ್ತಾ ಕೂರುವ ಬದಲು, ನಗುತ್ತಾ ಅವುಗಳನ್ನು ಎದುರಿಸುವ ಧೈರ್ಯ ಬೆಳೆಸಿಕೊಳ್ಳಬೇಕು. ಒಂದು ಮುಗುಳ್ನಗೆಯು ಎಂತಹ ಕ್ಲಿಷ್ಟಕರ ಪರಿಸ್ಥಿತಿಯನ್ನೂ ತಿಳಿಗೊಳಿಸುವ ಅದ್ಭುತ ಸಾಧನವಾಗಿದೆ.

ಸಣ್ಣ ಹೆಜ್ಜೆಗಳ ಮಹತ್ವ (The Importance of Small Steps)

ದೊಡ್ಡ ಗುರಿಗಳನ್ನು ತಲುಪಲು ನಾವು ಒಂದೇ ಬಾರಿಗೆ ದೊಡ್ಡ ಜಿಗಿತವನ್ನು ಮಾಡಬೇಕಿಲ್ಲ. ಪ್ರತಿದಿನ ನಾವು ಇಡುವ ಸಣ್ಣ ಸಣ್ಣ ಹೆಜ್ಜೆಗಳೇ ನಮ್ಮನ್ನು ಯಶಸ್ಸಿನ ಶಿಖರಕ್ಕೆ ಕೊಂಡೊಯ್ಯುತ್ತವೆ. ಪ್ರತಿದಿನವೂ ಹೊಸದನ್ನು ಕಲಿಯುವ ಮತ್ತು ನಮ್ಮ ತಪ್ಪುಗಳನ್ನು ತಿದ್ದಿಕೊಳ್ಳುವ ಪ್ರಯತ್ನ ಮಾಡಬೇಕು. ಇಂಗ್ಲಿಷ್‌ನ ಸುಂದರ ಗಾದೆ ಮಾತಿನಂತೆ, "Little drops of water make the mighty ocean" (ಸಣ್ಣ ನೀರಿನ ಹನಿಗಳೇ ಸೇರಿ ಬೃಹತ್ ಸಾಗರವಾಗುತ್ತವೆ).

ಬದುಕು ತುಂಬಾ ಚಿಕ್ಕದು, ಅದನ್ನು ಕೋಪ, ದ್ವೇಷ ಮತ್ತು ಚಿಂತೆಗಳಲ್ಲಿ ಕಳೆಯುವುದು ಸರಿಯಲ್ಲ. ನಿಮ್ಮ ಸುತ್ತಲಿನ ಜನರಿಗೆ ಪ್ರೀತಿ ಮತ್ತು ಸಂತೋಷವನ್ನು ಹಂಚುತ್ತಾ ಬದುಕುವುದೇ ನಿಜವಾದ ಜೀವನ. ನೀವು ಗಳಿಸಿದ ಆಸ್ತಿಗಿಂತ ನೀವು ಗಳಿಸಿದ ಒಳ್ಳೆಯ ಗುಣಗಳು ಮತ್ತು ಜನರ ಪ್ರೀತಿಯೇ ಕೊನೆಯವರೆಗೂ ನಿಮ್ಮೊಂದಿಗೆ ಉಳಿಯುತ್ತದೆ.



ಅದೇ ರೀತಿ ನಮ್ಮ ಸಣ್ಣ ಪ್ರಯತ್ನಗಳು ಒಂದು ದಿನ ದೊಡ್ಡ ಬದಲಾವಣೆಯನ್ನು ತರುತ್ತವೆ. ಸೋಲಿಗೆ ಹೆದರಿ ಪ್ರಯತ್ನವನ್ನು ನಿಲ್ಲಿಸದೆ, ನಿರಂತರವಾಗಿ ಮುನ್ನಡೆಯುವುದೇ ನಿಜವಾದ ಸಾಧನೆಯ ರಹಸ್ಯವಾಗಿದೆ.

ಮನಸ್ಸಿನ ಶಾಂತಿ ಮತ್ತು ನಿಯಂತ್ರಣ (Peace of Mind and Self-Control)

ಹೊರಗಿನ ಪ್ರಪಂಚವನ್ನು ಬದಲಾಯಿಸುವ ಮೊದಲು ನಾವು ನಮ್ಮ ಆಂತರಿಕ ಪ್ರಪಂಚವನ್ನು ಗೆಲ್ಲಬೇಕು. ನಮ್ಮ ಆಲೋಚನೆಗಳು ಮತ್ತು ಭಾವನೆಗಳ ಮೇಲೆ ನಮಗೆ ಹಿಡಿತವಿದ್ದರೆ, ಯಾರೂ ನಮ್ಮನ್ನು ಸೋಲಿಸಲು ಸಾಧ್ಯವಿಲ್ಲ. ಚೀನಾದ ಪ್ರಸಿದ್ಧ ವಾಣಿಜ್ಯೋದ್ಯಮಿ ಜಾಕ್ ಮಾ ಹೇಳುವಂತೆ, "ಇಂದು ಕಷ್ಟವಿದೆ, ನಾಳೆ ಇನ್ನೂ ಕಷ್ಟವಿರುತ್ತದೆ, ಆದರೆ ನಾಡಿದ್ದು ಖಂಡಿತವಾಗಿಯೂ ಸುಂದರವಾಗಿರುತ್ತದೆ." ಇಂಗ್ಲಿಷ್‌ನ ಮತ್ತೊಂದು ಅರ್ಥವತ್ತಾದ ಮಾತಿನಂತೆ, "Calmness is the cradle of power" (ಶಾಂತತೆಯೇ ಶಕ್ತಿಯ ತೊಟ್ಟಿಲು). ಮನಸ್ಸನ್ನು ಸ್ಥಿರವಾಗಿಟ್ಟುಕೊಂಡರೆ ಎಂತಹ ಬಿರುಗಾಳಿಯಲ್ಲೂ ನಾವು ದೃಢವಾಗಿ ನಿಲ್ಲಬಹುದು.

ಕೃತಜ್ಞತೆ ಮತ್ತು ಸಕಾರಾತ್ಮಕತೆ (Gratitude and Positivity)ನಮ್ಮಲ್ಲಿ ಏನಿಲ್ಲ ಎಂಬುದರ ಬಗ್ಗೆ ಕೊರಗುವ ಬದಲು, ನಮ್ಮಲ್ಲಿ ಏನಿದೆ ಎಂಬುದರ ಬಗ್ಗೆ ಸಂತೋಷಪಡಬೇಕು. ಬದುಕಿನಲ್ಲಿ ನಮಗೆ ಸಹಾಯ ಮಾಡಿದವರಿಗೆ ಮತ್ತು ಪ್ರಕೃತಿಗೆ ಕೃತಜ್ಞರಾಗಿರುವುದು ನಮ್ಮ ವ್ಯಕ್ತಿತ್ವಕ್ಕೆ ಮೆರುಗು ನೀಡುತ್ತದೆ. ಚೀನಾದ ಇನ್ನೊಂದು ಸುಂದರ ಗಾದೆ ಮಾತಿನಂತೆ, "ಮರ ನೆಡಲು ಅತ್ಯುತ್ತಮ ಸಮಯ ಇಪ್ಪತ್ತು ವರ್ಷಗಳ ಹಿಂದೆ ಇತ್ತು, ಎರಡನೇ ಅತ್ಯುತ್ತಮ ಸಮಯ ಈಗಲೇ." ಹಾಗೆಯೇ ಒಳ್ಳೆಯ ಕೆಲಸ ಮಾಡಲು ಇದೇ ಸರಿಯಾದ ಕ್ಷಣ. ಒಳ್ಳೆಯದನ್ನೇ ಯೋಚಿಸಿದರೆ ಒಳ್ಳೆಯದೇ ನಡೆಯುತ್ತದೆ ಎಂಬ ನಂಬಿಕೆಯೊಂದಿಗೆ ಬದುಕಬೇಕು.

ಸಕಾರಾತ್ಮಕ ಆಶಯ

ಜೀವನವು ಒಂದು ಸುಂದರವಾದ ಪಯಣವಾಗಿದೆ. ಇಲ್ಲಿ ಎದುರಾಗುವ ಪ್ರತಿಯೊಂದು ಅಡೆತಡೆಯೂ ನಮ್ಮನ್ನು ಮತ್ತಷ್ಟು ಬಲಿಷ್ಠರನ್ನಾಗಿ ಮಾಡಲು ಬರುವ ಪರೀಕ್ಷೆಗಳಷ್ಟೇ. ತಾಳ್ಮೆಯಿಂದ ಕಾಯುವ, ಮೌನದಿಂದ ಆಲೋಚಿಸುವ ಮತ್ತು ನಗುವಿನಿಂದ ಎಲ್ಲವನ್ನೂ ಸ್ವೀಕರಿಸುವ ಕಲೆಯನ್ನು ನಾವು ಕರಗತ ಮಾಡಿಕೊಂಡರೆ, ಈ ಜಗತ್ತಿನಲ್ಲಿ ನಮ್ಮನ್ನು ತಡೆಯುವ ಶಕ್ತಿ ಯಾವುದೂ ಇಲ್ಲ. ನೆನಪಿಡಿ, ನಮ್ಮ ಬದುಕಿನ ಶಿಲ್ಪಿಗಳು ನಾವೇ. ಪ್ರತಿಯೊಂದು ಹೊಸ ದಿನವೂ ನಮಗೆ ಸಿಕ್ಕಿರುವ ಹೊಸ ಅವಕಾಶವಾಗಿದೆ. ಆದ್ದರಿಂದ, ಆತ್ಮವಿಶ್ವಾಸದಿಂದ ಮುನ್ನಡೆಯಿರಿ, ನಿಮ್ಮ ಕನಸುಗಳನ್ನು ನನಸಾಗಿಸಿಕೊಳ್ಳಿ. ಪ್ರಸಿದ್ಧ ಸಾಧಕ ನೆಲ್ಸನ್ ಮಂಡೇಲಾ ಅವರು ಹೇಳಿದಂತೆ, "ಯಾವುದೇ ಕೆಲಸವು ಪೂರ್ಣಗೊಳ್ಳುವವರೆಗೂ ಅದು ಅಸಾಧ್ಯವೆಂದೇ ತೋರುತ್ತದೆ." ಹಾಗಾಗಿ ಎಂದಿಗೂ ಪ್ರಯತ್ನವನ್ನು ಕೈಬಿಡಬೇಡಿ, ಗೆಲುವು ನಿಮ್ಮದೇ ಆಗಿರುತ್ತದೆ.

ಕೊನೆ ಮಾತು

ಬದುಕು ತುಂಬಾ ಚಿಕ್ಕದು, ಅದನ್ನು ಕೋಪ, ದ್ವೇಷ ಮತ್ತು ಚಿಂತೆಗಳಲ್ಲಿ ಕಳೆಯುವುದು ಸರಿಯಲ್ಲ. ನಿಮ್ಮ ಸುತ್ತಲಿನ ಜನರಿಗೆ ಪ್ರೀತಿ ಮತ್ತು ಸಂತೋಷವನ್ನು ಹಂಚುತ್ತಾ ಬದುಕುವುದೇ ನಿಜವಾದ ಜೀವನ. ನೀವು ಗಳಿಸಿದ ಆಸ್ತಿಗಿಂತ ನೀವು ಗಳಿಸಿದ ಒಳ್ಳೆಯ ಗುಣಗಳು ಮತ್ತು



ಜನರ ಪ್ರೀತಿಯೇ ಕೊನೆಯವರೆಗೂ ನಿಮ್ಮೊಂದಿಗೆ ಉಳಿಯುತ್ತದೆ. ಈ ಸುಂದರ ಬದುಕನ್ನು ತಾಳ್ಮೆ, ಮೌನ ಮತ್ತು ನಗುವಿನೊಂದಿಗೆ ಅರ್ಥಪೂರ್ಣವಾಗಿ ಬದುಕಿ; ಜೀವನದ ಪ್ರತಿಯೊಂದು ಸವಾಲನ್ನೂ ಮೆಟ್ಟಿ ನಿಲ್ಲುವ ಶಕ್ತಿ ನಿಮ್ಮದಾದರೆ, ಯಶಸ್ಸು ಸದಾ ನಿಮ್ಮ ನೆರಳಾಗುತ್ತದೆ.

ಜಯಶ್ರೀ ಜೆ ಅಬ್ಬಿಗೇರಿ.
ಇಂಗ್ಲೀಷ್ ಉಪನ್ಯಾಸಕರು
ಬೆಳಗಾವಿ – ಮೊ: 9449234142

ಸಲಹೆ ಬೇಡ, ಸಾಥ್ ಕೊಡಿ!

■ ಉದಯರಶ್ಮಿ ದಿನಪತ್ರಿಕೆ

ಜಗತ್ತಿನಲ್ಲಿ ಪುಕ್ಕಟೆಯಾಗಿ ಮತ್ತು ಹೇರಳವಾಗಿ ಸಿಗುವುದೆಂದರೆ ಸಲಹೆ ಮಾತ್ರ. ಆದರೆ ಅಗತ್ಯದ ಸಮಯದಲ್ಲಿ ನೆರವಿಗೆ ಬರುವ, ಸಂಕಷ್ಟದಲ್ಲಿ ಹೆಗಲಿಗೆ ಹೆಗಲು ಕೊಟ್ಟು ನಿಲ್ಲುವ ಮನಸ್ಸುಗಳು ಸಿಗುವುದು ಅಪರೂಪ. ಸೋತವನಿಗೆ ಸೋಲಿನ ಕಾರಣಗಳನ್ನು ವಿವರಿಸುವವರಿಗಿಂತ, ಸೋಲಿನಿಂದ ಮೇಲೆತ್ತುವ ಕೈಗಳ ಅಗತ್ಯವಿರುತ್ತದೆ. ನೋವಿನಲ್ಲಿರುವವನಿಗೆ ಉಪದೇಶ ಮಾಡುವುದಕ್ಕಿಂತ ಅವನ ನೋವಿನಲ್ಲಿ ಭಾಗಿಯಾಗುವುದೇ



ಶ್ರೇಷ್ಠ ಮಾನವೀಯ ಗುಣ.

"ನನಗೆ ನಿನ್ನ ಸಲಹೆ ಬೇಡ, ಸಾಥ್ ಕೊಡು; ನಿನ್ನ ಸಲಹೆಯಿಂದ ನಾಲ್ಕು ಹೆಜ್ಜೆ ಇಡಬಹುದೇನೋ, ಆದರೆ ನಿನ್ನ ಸಾಥ್‌ನಿಂದ ಜಗತ್ತನ್ನೇ ಗೆಲ್ಲಬಲ್ಲೆ!" ಎಂಬ ಮಾತು ಬದುಕಿನ ಬಹುದೊಡ್ಡ ಸತ್ಯವನ್ನು ಅನಾವರಣಗೊಳಿಸುತ್ತದೆ.

ಇದಕ್ಕೊಂದು ಸುಂದರವಾದ ಪೌರಾಣಿಕ ದೃಷ್ಟಾಂತವಿದೆ. ಸಮುದ್ರದ ದಡದಲ್ಲಿದ್ದ ಪುಟ್ಟ ಹಕ್ಕಿಯೊಂದು ತನ್ನ ಕೊಕ್ಕಿನಿಂದ ಸಮುದ್ರದ ನೀರನ್ನು ತೆಗೆದು ಪಕ್ಕದಲ್ಲಿದ್ದ ಸಣ್ಣ ಹೊಂಡಕ್ಕೆ ಹಾಕುತ್ತಿತ್ತು. ಇದನ್ನು ಗಮನಿಸಿದ ಮತ್ತೊಂದು ಹಕ್ಕಿ, "ಏನು ಮಾಡುತ್ತಿರುವೆ?" ಎಂದು ಕೇಳಿತು. ಅದಕ್ಕೆ ಆ ಹಕ್ಕಿ, "ಈ ಸಮುದ್ರ ನನ್ನ ಮೂರು ಮರಿಗಳನ್ನು ತನ್ನೊಳಗೆ ಸೆಳೆದುಕೊಂಡಿದೆ. ಹಾಗಾಗಿ ಈ ಸಮುದ್ರವನ್ನೇ ಖಾಲಿ ಮಾಡುತ್ತೇನೆ" ಎಂದಿತು.

ಆಶ್ಚರ್ಯಗೊಂಡ ಮತ್ತೊಂದು ಹಕ್ಕಿ, "ನಿನ್ನ ಗಾತ್ರವೆಷ್ಟು? ಸಮುದ್ರದ ವಿಸ್ತಾರವೆಷ್ಟು? ನಿನ್ನಿಂದ ಇದು ಸಾಧ್ಯವೇ?" ಎಂದು ಪ್ರಶ್ನಿಸಿತು. ಆಗ ಆ ಪುಟ್ಟ ಹಕ್ಕಿ ದೃಢವಾಗಿ, "ನನಗೆ ನಿನ್ನ ಸಲಹೆ ಬೇಡ, ಸಾಧ್ಯವಾದರೆ ಸಾಥ್ ಕೊಡು" ಎಂದಿತು. ಆ ಮಾತಿನಿಂದ ಪ್ರೇರಿತಗೊಂಡ ಹಕ್ಕಿಯೂ ಅದರೊಂದಿಗೆ ಕೈಜೋಡಿಸಿತು. ಮತ್ತೊಂದು ಹಕ್ಕಿ ಬಂತು, ಅದಕ್ಕೂ ಅದೇ ಉತ್ತರ ದೊರೆಯಿತು. ಹೀಗೆ ಸಾವಿರಾರು ಹಕ್ಕಿಗಳು ಒಂದಾಗಿ ಸಮುದ್ರವನ್ನು ಖಾಲಿ ಮಾಡುವ ಕಾರ್ಯಕ್ಕೆ ಮುಂದಾದವು.

ಈ ಸಂಗತಿಯನ್ನು ಗಮನಿಸಿದ ಭಗವಾನ್ ವಿಷ್ಣುವಿನ ವಾಹನವಾದ ಗರುಡನೂ ಹಕ್ಕಿಗಳ ನೆರವಿಗೆ ಧಾವಿಸಲು

ಸಲಹೆ ನೀಡುವುದು ತಪ್ಪಲ್ಲ. ಸೂಕ್ತ ಸಮಯದಲ್ಲಿ ನೀಡುವ ಉತ್ತಮ ಸಲಹೆಯೂ ಬದುಕಿನ ದಿಕ್ಕನ್ನೇ ಬದಲಾಯಿಸಬಲ್ಲದು. ಆದರೆ ವ್ಯಕ್ತಿಯ ಅಗತ್ಯವನ್ನು ಅರ್ಥಮಾಡಿಕೊಳ್ಳದೆ ನೀಡುವ ಸಲಹೆ ಕೆಲವೊಮ್ಮೆ ಅವನ ಮನೋಬಲವನ್ನೇ ಕುಗ್ಗಿಸಬಹುದು. ಮನುಷ್ಯನಿಗೆ ಯಾವಾಗ ಮಾರ್ಗದರ್ಶನ ಬೇಕು, ಯಾವಾಗ ನೆರವು ಬೇಕು ಎಂಬುದನ್ನು ಅರಿಯುವುದೇ ನಿಜವಾದ ವಿವೇಕ.



ಸಿದ್ಧನಾದನು. ಆಗ ವಿಷ್ಣು, "ಇಷ್ಟು ಹಕ್ಕಿಗಳಿಂದ ಸಮುದ್ರವನ್ನು ಖಾಲಿ ಮಾಡಲು ಸಾಧ್ಯವೇ?" ಎಂದು ಪ್ರಶ್ನಿಸಿದಾಗ ಗರುಡನು, "ಪ್ರಭುವೇ, ಸಲಹೆ ಬೇಡ, ಸಾಥ್ ಕೊಡಿ" ಎಂದು ವಿನಂತಿಸಿದನು. ಕೊನೆಗೆ ವಿಷ್ಣುವೇ ಹಕ್ಕಿಗಳ ನೆರವಿಗೆ ಧಾವಿಸಿದಾಗ, ಸಮುದ್ರವು ಭಯಗೊಂಡು ಆ ಹಕ್ಕಿಯ ಮರಿಗಳನ್ನು ಹಿಂದಿರುಗಿಸಿತು ಎಂಬುದು ಕಥೆಯ ಸಾರ.



ಇಲ್ಲಿ ಗೆದ್ದದ್ದು ಪುಟ್ಟ ಹಕ್ಕಿಯ ಶಕ್ತಿಯಲ್ಲ; ಅದರ ಸಂಕಲ್ಪಕ್ಕೆ ದೊರೆತ ಸಾಮೂಹಿಕ ಬೆಂಬಲ. ಅಸಾಧ್ಯವೆಂದು ಕಾಣುವ ಕಾರ್ಯವನ್ನೂ ಒಗ್ಗಟ್ಟು ಮತ್ತು ಸಹಕಾರದಿಂದ ಸಾಧ್ಯವಾಗಿಸಬಹುದು ಎಂಬುದಕ್ಕೆ ಇದೊಂದು ಅರ್ಥಪೂರ್ಣ ದೃಷ್ಟಾಂತ.

ಇಂದಿನ ಸಮಾಜದಲ್ಲಿ ಇತರರ ಸಮಸ್ಯೆಗಳನ್ನು ವಿಶ್ಲೇಷಿಸುವವರು ಸಾಕಷ್ಟಿದ್ದಾರೆ. ಆದರೆ ಸಮಸ್ಯೆಗಳ ಪರಿಹಾರಕ್ಕೆ ಕೈಜೋಡಿಸುವವರು ವಿರಳವಾಗಿದ್ದಾರೆ. ಬಡವನಿಗೆ ದುಡಿಯುವ ಸಲಹೆ ನೀಡುವ ಬದಲು ಉದ್ಯೋಗದ ಅವಕಾಶ ಕಲ್ಪಿಸಬೇಕು. ಸಂಕಷ್ಟದಲ್ಲಿರುವ ರೈತನಿಗೆ ಧೈರ್ಯ ಹೇಳುವುದರ ಜೊತೆಗೆ ನೆರವಿನ ಹಸ್ತ ಚಾಚಬೇಕು. ಸೋತ ವಿದ್ಯಾರ್ಥಿಗೆ ಟೀಕೆಯ ಬದಲು ಆತ್ಮವಿಶ್ವಾಸ ತುಂಬಬೇಕು. ಬದುಕಿನಲ್ಲಿ ಕುಗ್ಗಿದ ವ್ಯಕ್ತಿಗೆ ಉಪದೇಶಕ್ಕಿಂತ ಆತ್ಮೀಯವಾದ ಆಸರೆ ನೀಡಬೇಕು.

ಆಗ ಮಾತ್ರ ನಮ್ಮ ಮಾತುಗಳಿಗೆ ಮಾನವೀಯತೆಯ ಮೌಲ್ಯ ದೊರೆಯುತ್ತದೆ.

ಸಲಹೆ ನೀಡುವುದು ತಪ್ಪಲ್ಲ. ಸೂಕ್ತ ಸಮಯದಲ್ಲಿ ನೀಡುವ ಉತ್ತಮ ಸಲಹೆಯೂ ಬದುಕಿನ ದಿಕ್ಕನ್ನೇ ಬದಲಾಯಿಸಬಲ್ಲದು. ಆದರೆ ವ್ಯಕ್ತಿಯ ಅಗತ್ಯವನ್ನು ಅರ್ಥಮಾಡಿಕೊಳ್ಳದೆ ನೀಡುವ ಸಲಹೆ ಕೆಲವೊಮ್ಮೆ ಅವನ ಮನೋಬಲವನ್ನೇ ಕುಗ್ಗಿಸಬಹುದು. ಮನುಷ್ಯನಿಗೆ ಯಾವಾಗ ಮಾರ್ಗದರ್ಶನ ಬೇಕು, ಯಾವಾಗ ನೆರವು ಬೇಕು ಎಂಬುದನ್ನು ಅರಿಯುವುದೇ ನಿಜವಾದ ವಿವೇಕ.

ಕುಟುಂಬದಲ್ಲಾಗಲೀ, ಸ್ನೇಹ ಸಂಬಂಧಗಳಲ್ಲಾಗಲೀ, ಸಾಮಾಜಿಕ ಬದುಕಿನಲ್ಲಾಗಲೀ ಪರಸ್ಪರ ಸಹಕಾರವಿದ್ದಾಗ ಮಾತ್ರ ಸಂಬಂಧಗಳು ಗಟ್ಟಿಯಾಗುತ್ತವೆ. ಕಷ್ಟದ ದಿನಗಳಲ್ಲಿ ನಮ



ಡಾ.ವೀರೇಂದ್ರ ಹೆಗ್ಗಡೆ ಜನ್ಮದಿನ :ಅನ್ನದಾಸೋಹ

■ ಉದಯರಶ್ಮಿ ದಿನಪತ್ರಿಕೆ

ಚಡಚಣ: ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಡಾ. ಡಿ. ವೀರೇಂದ್ರ ಹೆಗ್ಗಡೆ ಅವರ ಜನ್ಮದಿನದ ಪ್ರಯುಕ್ತ ತಾಲೂಕಿನ ಲೋಣಿ ಬಿ.ಕೆ. ಗ್ರಾಮದ ಮಾಹೇರ್ ವೃದ್ಧಾಶ್ರಮದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ವತಿಯಿಂದ ಅನ್ನಸಂತರ್ಪಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮಕ್ಕೆ ಇಂಡಿ ತಾಲೂಕು ಯೋಜನಾಧಿಕಾರಿ ನಟರಾಜ ಎಲ್.ಎಂ. ಅವರು ದೀಪ ಬೆಳಗಿಸುವ ಮೂಲಕ ಚಾಲನೆ ನೀಡಿ ಮಾತನಾಡಿದರು.

ಪೂಜ್ಯ ಡಾ. ಡಿ. ವೀರೇಂದ್ರ ಹೆಗ್ಗಡೆ ಅವರು ತಮ್ಮ 21ನೇ ವಯಸ್ಸಿನಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳದ ಪಟ್ಟಾಧಿಕಾರ ವಹಿಸಿಕೊಂಡು ಧಾರ್ಮಿಕ ಹಾಗೂ ಸಾಮಾಜಿಕ ಕ್ಷೇತ್ರಗಳಲ್ಲಿ ಮಹತ್ವದ ಸೇವೆ ಸಲ್ಲಿಸುತ್ತಿದ್ದಾರೆ. ಶ್ರೀ ಕ್ಷೇತ್ರದ ಮೂಲಕ ಅಭಯದಾನ, ಅನ್ನದಾನ, ವಿದ್ಯಾದಾನ ಮತ್ತು ಔಷಧದಾನ ಎಂಬ ಚತುರ್ದಾನಗಳನ್ನು ನೀಡುತ್ತಾ ಸಮಾಜಮುಖಿ ಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಮೂಲಕ ಲಕ್ಷಾಂತರ ಕುಟುಂಬಗಳ ಬದುಕಿನಲ್ಲಿ ಹೊಸ ಬೆಳಕು ಮೂಡಿಸಿದ್ದು, ಅನೇಕ ಜನರಿಗೆ ದಾರಿದೀಪವಾಗಿದ್ದಾರೆ ಎಂದು ಹೇಳಿದರು.

ಲೋಣಿ ಬಿ.ಕೆ. ವಲಯದ ಮೇಲ್ವಿಚಾರಕ ಮಹಾಂತೇಶ ವಿ.ಎ. ಕಾರ್ಯಕ್ರಮ ನಿರೂಪಿಸಿದರು.

ಈ ಸಂದರ್ಭದಲ್ಲಿ ಆಶ್ರಮದ ಇನಾಯತಖಾನ್ ಪಠಾಣ, ರೇವಣಸಿದ್ಧ ಪೂಜಾರಿ, ದೀಪಾ ಚಿತ್ತಾಪುರ, ಯೋಜನೆಯ ಸಿಬ್ಬಂದಿಗಳಾದ ಶಿವಯ್ಯ ಹಿರೇಮಠ, ಸಿದ್ದಪ್ಪ ಚುಳಕಿ, ಸುದೀಪ್ ಕಟಗೇರಿ, ಅರ್ಜುನ ಪಾಟೀಲ, ಎಲ್ಲ ಸೇವಾಪ್ರತಿನಿಧಿಗಳು, ಸಿಎಸ್‌ಸಿ ಸೇವಾದಾರರು ಸೇರಿದಂತೆ ಹಲವಾರು ಉಪಸ್ಥಿತರಿದ್ದರು.

ಸಿಂದಗಿಯ ಶ್ರೀಗುರುಕೃಪಾ ಶಾಲೆಯಲ್ಲಿ ಕ್ಲಸ್ಟರ್ ಮಟ್ಟದ ಪ್ರತಿಭಾ ಕಾರಂಜಿ ಸಂಭ್ರಮ । ಬಿಸಿಯೂಟ ಸಹಾಯಕ ನಿರ್ದೇಶಕ ಅರವಿಂದ ಡೋಣೂರ ಅಭಿಮತ

ಮಕ್ಕಳ ಸುಪ್ತ ಪ್ರತಿಭೆ ಅನಾವರಣಕ್ಕೆ ಪ್ರತಿಭಾ ಕಾರಂಜಿ ಉತ್ತಮ ವೇದಿಕೆ

■ ಉದಯರಶ್ಮಿ ದಿನಪತ್ರಿಕೆ



ಸಿಂದಗಿ: ವಿದ್ಯಾರ್ಥಿಗಳಲ್ಲಿ ಅಡಗಿರುವ ಸುಪ್ತ ಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾಹಿಸುವುದರ ಜೊತೆಗೆ ಅವರ ಸೃಜನಶೀಲತೆ, ಆತ್ಮವಿಶ್ವಾಸ ಹಾಗೂ ಸರ್ವತೋಮುಖ ವ್ಯಕ್ತಿತ್ವ ವಿಕಸನಕ್ಕೆ ಪ್ರತಿಭಾ ಕಾರಂಜಿ ಉತ್ತಮ ವೇದಿಕೆಯಾಗಿದೆ ಎಂದು ಬಿಸಿಯೂಟ ಸಹಾಯಕ ನಿರ್ದೇಶಕ ಅರವಿಂದ ಡೋಣೂರ ಅಭಿಪ್ರಾಯಪಟ್ಟರು.

ಸಿಂದಗಿ ನಗರದ ಶ್ರೀಗುರು ಕೃಪಾ ಆಂಗ್ಲ ಮಾಧ್ಯಮ ಹಿರಿಯ ಪ್ರಾಥಮಿಕ ಹಾಗೂ ಪ್ರೌಢಶಾಲೆಯ ಆವರಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಕ್ಷೇತ್ರ ಶಿಕ್ಷಣಾಧಿಕಾರಿಗಳ ಹಾಗೂ ಕ್ಷೇತ್ರ ಸಮನ್ವಯಾಧಿಕಾರಿಗಳ ಕಾರ್ಯಾಲಯ ಮತ್ತು ಸಮೂಹ ಸಂಪನ್ಮೂಲ ಕೇಂದ್ರದ ಸಹಯೋಗದಲ್ಲಿ ಆಯೋಜಿಸಿದ್ದ ಸಿಂದಗಿ ಕ್ಲಸ್ಟರ್ ಮಟ್ಟದ ಪ್ರತಿಭಾ ಕಾರಂಜಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಪ್ರತಿಭಾ ಕಾರಂಜಿ ಎಂಬುದು ಕರ್ನಾಟಕ ಸರ್ಕಾರದ ಶಾಲಾ ಶಿಕ್ಷಣ ಇಲಾಖೆಯು ಪ್ರಾಥಮಿಕ ಮತ್ತು ಪ್ರೌಢಶಾಲಾ ವಿದ್ಯಾರ್ಥಿಗಳಿಗಾಗಿ ಆಯೋಜಿಸುವ ಮಹತ್ವದ ಸಾಂಸ್ಕೃತಿಕ ಹಾಗೂ ಸಾಹಿತ್ಯಿಕ ಸ್ಪರ್ಧಾ ಕಾರ್ಯಕ್ರಮವಾಗಿದೆ. ಪ್ರತಿಯೊಂದು ಮಗುವಿನಲ್ಲಿಯೂ ಒಂದಲ್ಲ ಒಂದು ವಿಶೇಷ ಪ್ರತಿಭೆ ಅಡಗಿರುತ್ತದೆ. ಕೆಲವರು ಹಾಡುಗಾರಿಕೆಯಲ್ಲಿ, ಇನ್ನು ಕೆಲವರು ನೃತ್ಯ, ಚಿತ್ರಕಲೆ, ಭಾಷಣ, ಅಭಿನಯ, ಸಾಹಿತ್ಯ, ಕವನ ರಚನೆ ಹಾಗೂ ಕಥೆ ಹೇಳುವಿಕೆಯಲ್ಲಿ ಆಸಕ್ತಿ ಮತ್ತು ಸಾಮರ್ಥ್ಯ ಹೊಂದಿರುತ್ತಾರೆ. ಇಂತಹ ಪ್ರತಿಭೆಗಳನ್ನು ಗುರುತಿಸಿ ಸೂಕ್ತ ವೇದಿಕೆ ಕಲ್ಪಿಸುವುದೇ ಪ್ರತಿಭಾ ಕಾರಂಜಿಯ ಪ್ರಮುಖ ಉದ್ದೇಶವಾಗಿದೆ ಎಂದರು.

ಈ ವೇಳೆ ಇಸಿಒ ಬಿ.ಬಿ.ಪಾಟೀಲ, ಕಾರ್ಯನಿರತ ಪತ್ರಕರ್ತರ ಸಂಘದ ತಾಲೂಕಾಧ್ಯಕ್ಷ ಮಹಾಂತೇಶ ನೂಲಾನವರ ಮಾತನಾಡಿ, ಇಂದಿನ ಶಿಕ್ಷಣ ವ್ಯವಸ್ಥೆಯಲ್ಲಿ ಕೇವಲ ಪಠ್ಯಪುಸ್ತಕದ ಜ್ಞಾನಕ್ಕೆ ಸೀಮಿತವಾಗದೆ ಮಕ್ಕಳಲ್ಲಿ ಜೀವನ ಕೌಶಲ್ಯ, ಸಂವಹನ ಸಾಮರ್ಥ್ಯ, ನಾಯಕತ್ವ ಗುಣ, ಸೃಜನಶೀಲ ಚಿಂತನೆ ಹಾಗೂ ಸಾಮಾಜಿಕ ಜವಾಬ್ದಾರಿಯನ್ನು ಬೆಳೆಸುವುದು ಅಗತ್ಯವಾಗಿದೆ. ಈ ನಿಟ್ಟಿನಲ್ಲಿ ಪ್ರತಿಭಾ ಕಾರಂಜಿ ಮಕ್ಕಳಿಗೆ ತಮ್ಮ ಸಾಮರ್ಥ್ಯವನ್ನು ಪ್ರದರ್ಶಿಸಲು ಉತ್ತಮ ಅವಕಾಶ ಒದಗಿಸುತ್ತದೆ ಎಂದರು.

ಈ ವೇಳೆ ಬಿಆರ್‌ಪಿ ಜೆ.ಎಸ್.ಅಲ್ದಿಮಠ, ಸಿಆರ್‌ಪಿ ಸಂಘದ ಅಧ್ಯಕ್ಷ ರಾಜು ಭೂಸನೂರ, ಪತ್ರಕರ್ತ ರಮೇಶ ಪೂಜಾರ, ಎನ್.ವಿ.ಕುಲಕರ್ಣಿ, ಸಿದ್ರಾಮ ಬಡಿಗೇರ, ಹಣಮಂತ ಪೋದ್ದಾರ, ಪ್ರಸನ್ನ ಕುಲಕರ್ಣಿ, ಹರೀಶ ಪೋದ್ದಾರ, ಸೌಮ್ಯ ಪೋದ್ದಾರ, ದೀಪಾ ಹಿರೇಮಠ, ಸವಿತಾ ಬನಗುಡಿ, ಸುಕನ್ಯಾ ಹುಬ್ಬಳ್ಳಿ, ಸ್ವರೂಪ, ಶಿವರಾಜ, ರಾಜಶೇಖರ ಬಿರಾದಾರ, ಮೇಘಾ, ಭಾರತಿ ಬಿರಾದಾರ, ಸಮ್ರತಾ ಎ., ಜ್ಯೋತಿ ಪಾಟೀಲ, ಅಕ್ಷತಾ ಕುಲಕರ್ಣಿ ಸುಜಾತಾ ಜೈನ, ರಾಜಶೇಖರ ಕಾಂಬಳೆ, ಎ.ಕೆ.ಬಿರಾದಾರ, ಸಿಆರ್‌ಪಿ ಎನ್.ಎಸ್.ತಿಳಗೂಳ ಸ್ವಾಗತಿಸಿದರು. ಶೃತಿ ಪೋದ್ದಾರ ಹಾಗೂ ಶರಣಬಸವ ಲಂಗೋಟಿ ನಿರೂಪಿಸಿದರು. ಜಗದೀಶ ಸಿಂಗೆ ವಂದಿಸಿದರು.

ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ವಿವಿಧ ಸಾಂಸ್ಕೃತಿಕ ಹಾಗೂ ಸಾಹಿತ್ಯಿಕ ಸ್ಪರ್ಧೆಗಳಲ್ಲಿ ಉತ್ಸಾಹದಿಂದ ಪಾಲ್ಗೊಂಡು ತಮ್ಮಲ್ಲಿರುವ ಕಲಾ ಪ್ರತಿಭೆಯನ್ನು ಅನಾವರಣಗೊಳಿಸಿದರು. ಶಿಕ್ಷಕರು, ಶಾಲಾ ಸಿಬ್ಬಂದಿ ಹಾಗೂ ಪಾಲಕರು ಮಕ್ಕಳಿಗೆ ಪ್ರೋತ್ಸಾಹ ನೀಡಿದರು.

ನ.25 ರಿಂದ ನಿಡಗುಂದಿಯಲ್ಲಿ ಬನಶಂಕರಿ ದೇವಿ ಜಾತ್ರೆ

■ ಉದಯರಶ್ಮಿ ದಿನಪತ್ರಿಕೆ

ನಿಡಗುಂದಿ: ಪಟ್ಟಣದ ಬನಶಂಕರಿ ದೇವಿ ಜಾತ್ರೆ ನಿಮಿತ್ತ ನಾನಾ ಸಾಮಾಜಿಕ ಹಾಗೂ ಧಾರ್ಮಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ.

ನ. 25 ರಂದು ಹೊನಲು ಬೆಳಕಿನ ಮಿನಿ ಫೋರ್ ಕ್ರಿಕೆಟ್ ಟೂರ್ನಮೆಂಟ್ ನಡೆಯಲಿದೆ.

ನ. 27 ರಂದು ಬೆಳಗ್ಗೆ ವೀರಭದ್ರೇಶ್ವರ ದೇವಸ್ಥಾನದಿಂದ ಪುರವಂತರ ಸೇವೆಯೊಂದಿಗೆ ಬನಶಂಕರಿ ದೇವಿ ದೇವಸ್ಥಾನಕ್ಕೆ ಕುಂಭ, ಮಹಾದಾನಿ ಬಸಪ್ಪ ಶೇಡಗಟ್ಟಿ ಅವರ ಭಾವಚಿತ್ರ ಮೆರವಣಿಗೆ ನಡೆಯಲಿದೆ. ನಂತರ ಬನಶಂಕರಿ ದೇವಿಗೆ ಕುಂಭಾಭಿಷೇಕ, ಸಂಜೆ ಮಾಲೆ ಉತ್ಸವ, ರಾತ್ರಿ ನಾಟಕ ಪ್ರದರ್ಶನ ಜರುಗಲಿದೆ. ನ. 28 ರಂದು ಬೆಳಗ್ಗೆ ಕಳಸೋತ್ಸವ, ಸಂಜೆ ರಥೋತ್ಸವ, ರಾತ್ರಿ ನಾಟಕ ಪ್ರದರ್ಶನ ನಡೆಯಲಿದೆ.

ನ. 29 ರಂದು ಮಧ್ಯಾಹ್ನ ಗೊಂಬೆ ಕುಣಿತ, ಕುದುರೆಗಳ ಕುಣಿತ, ಡೊಳ್ಳು ಹಾಗೂ ಚೌಡಕಿ ಮೇಳದೊಂದಿಗೆ ದ್ಯಾಮವ್ವನ ಸೋಗು ಜರುಗಲಿದೆ. ನಂತರ ಜಂಗೀ ಕುಸ್ತಿಗಳು, ರಾತ್ರಿ ರಸಮಂಜರಿ ಕಾರ್ಯಕ್ರಮ ನಡೆಯಲಿದೆ.

ನ. 30 ರಂದು ರಾತ್ರಿ ನಾಟಕ ಪ್ರದರ್ಶನ, ಡಿ. 2 ರಂದು ಬೆಳಗ್ಗೆ ಕಳಸ ಇಳಿಸುವುದು, ಸಂಜೆ ದೇವಿಯ ಕಳಸದ ಮರುಆಗಮನ ಹಾಗೂ ಜಾತ್ರೆ ಮಂಗಲ ಕಾರ್ಯಕ್ರಮ ಜರುಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ನ.28 ರಂದು 'ಸಂತನೆಂದರೆ ಯಾರು' ಕೃತಿ ಬಿಡುಗಡೆ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಉತ್ತರ ಕರ್ನಾಟಕ ಯುವ ಲೇಖಕರ ವೇದಿಕೆ ಹಾಗೂ ಪ್ರಗತಿ ಶಾಲೆಯ ಸಹಯೋಗದಲ್ಲಿ ನ. 28 ರಂದು ಮುಂಜಾನೆ 10–30 ಗಂಟೆಗೆ ಇಲ್ಲಿನ ರಾಜಾಜಿನಗರದ ಪ್ರಗತಿ ಶಾಲೆಯ ಸಭಾಂಗಣದಲ್ಲಿ ಸಾಹಿತಿ ಶ್ರೀನಿವಾಸ ಜಾಲವಾದಿ ಮತ್ತು ರಮೇಶ ಕೋಟ್ಯಾಳ ಅವರ ಸಂಪಾದನೆಯ 'ಸಂತನೆಂದರೆ ಯಾರು' ಸಿದ್ಧೇಶ್ವರ ಶ್ರೀಗಳವರ ಕುರಿತು ಬರೆದ ಕವನ ಸಂಕಲನ ಬಿಡುಗಡೆ ಹಾಗೂ ಕವಿಗೋಷ್ಠಿ ಸಮಾರಂಭ ಜರುಗಲಿದೆ.

ಜಮಖಂಡಿ ತಾಲೂಕಿನ ಹಲ್ಯಾಳದ ಗುರುದೇವಾಶ್ರಮದ ಶ್ರೀ ಹರ್ಷಾನಂದ ಸ್ವಾಮೀಜಿ ಸಾನಿಧ್ಯ ವಹಿಸುವರು. ಹಿರಿಯ ಸಾಹಿತಿ ಸಿದ್ಧಲಿಂಗ ಮನಹಳ್ಳಿ ಅಧ್ಯಕ್ಷತೆ ವಹಿಸಿ ಕೃತಿ ಬಿಡುಗಡೆ ಮಾಡುವರು. ಕಸಾಪ ಜಿಲ್ಲಾಧ್ಯಕ್ಷ ಹಾಸಿಂಪೀರ ವಾಲೀಕಾರ ಉದ್ಘಾಟಿಸುವರು. ಜಿಲ್ಲಾ ಕಸಾಪ ಗೌರವಾಧ್ಯಕ್ಷೆ ಭಾರತಿ ಪಾಟೀಲ ಕೃತಿ ಪರಿಚಯಿಸುವರು. ಸಂಯುಕ್ತ ಕರ್ನಾಟಕ ಜಿಲ್ಲಾ ಮುಖ್ಯ ವರದಿಗಾರ ವಾಸುದೇವ ಹೆರಕಲ್ ಅ.ಭಾ.ವೀ.ಲಿಂ. ಮಹಾ ಸಭಾದ ಜಿಲ್ಲಾಧ್ಯಕ್ಷ ವ್ಹಿ.ಸಿ.ನಾಗಠಾಣ ಹಾಗೂ ಫ.ಗು.ಹಳಕಟ್ಟಿ ಸಂಶೋಧನಾ ಕೇಂದ್ರದ ಸಂಯೋಜನಾಧಿಕಾರಿ ಡಾ. ವ್ಹಿ.ಡಿ.ಐಹೊಳ್ಳಿ ಮುಖ್ಯ ಅತಿಥಿಗಳಾಗಿ ಆಗಮಿಸುವರು. ಉತ್ತರ ಕರ್ನಾಟಕ ಯುವ ಲೇಖಕರ ವೇದಿಕೆಯ ಸಂಚಾಲಕ ಶ್ರೀನಿವಾಸ ಜಾಲವಾದಿ ಉಪಸ್ಥಿತರಿರುವರು.

ಮಧ್ಯಾಹ್ನ 12–30 ಗಂಟೆಗೆ ಕವಿಗೋಷ್ಠಿ ಜರುಗಲಿದ್ದು ಆಯ್ದ ಕವಿಗಳು ಸಿದ್ಧೇಶ್ವರ ಶ್ರೀಗಳವರ ಕುರಿತು ಬರೆದ ಕವನ ವಾಚಿಸಲಿದ್ದಾರೆ. ಸಾಹಿತಿ ಶಂಕರ ಬೈಚಬಾಳ ಅಧ್ಯಕ್ಷತೆ ವಹಿಸುವರು. ವಿಶ್ರಾಂತ ಪ್ರಾಚಾರ್ಯ ಪ್ರೊ. ಕೆ.ಎಸ್. ಪಾಟೀಲ ಸಾಹಿತಿ ವಿವೇಕಾನಂದ ಪಾಟೀಲ ಸಂಗಮೇಶ ಬದಾಮಿ ಪತ್ರಕರ್ತ ಅನಿಲ ಹೊಸಮನಿ ಮುಖ್ಯ ಅತಿಥಿಗಳಾಗಿ ಆಗಮಿಸುವರು ಎಂದು ವೇದಿಕೆಯ ಕಾರ್ಯದರ್ಶಿ ಮುರುಗೇಶ ಸಂಗಮ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶಿಕ್ಷಕರಿಗೂ ಸಹಪಠ್ಯ ಚಟುವಟಿಕೆ ಅಗತ್ಯ :ಕಾಲವಾಡ

■ ಉದಯರಶ್ಮಿ ದಿನಪತ್ರಿಕೆ



ಇಂಡಿ: ಶಿಕ್ಷಕರು ಕೇವಲ ಪಾಠ ಬೋಧನೆಗೆ ಸೀಮಿತವಾಗದೆ, ತಮ್ಮ ಬಹುಮುಖ ಪ್ರತಿಭೆಯನ್ನು ಪ್ರದರ್ಶಿಸಲು ಸಹಪಠ್ಯ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಬೇಕು ಎಂದು ದೈಹಿಕ ಶಿಕ್ಷಣ ಪರಿವೀಕ್ಷಕ ಪಿ ಬಿ ಕಾಲವಾಡ ಹೇಳಿದರು.

ಬುಧವಾರ ನಗರದ ಗುರುಭವನದಲ್ಲಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಜಿಲ್ಲಾ ಪಂಚಾಯತ್ ವಿಜಯಪುರ ರಾಷ್ಟ್ರೀಯ ಶಿಕ್ಷಕರ ಕಲ್ಯಾಣ ಪ್ರತಿಷ್ಠಾನ, ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ, ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ಬೆಂಗಳೂರು ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿ ಮತ್ತು ಕ್ಷೇತ್ರ ಸಮನ್ವಯಾಧಿಕಾರಿಗಳ ಕಾರ್ಯಾಲಯದ ಸಹಯೋಗದಲ್ಲಿ ಹಮ್ಮಿಕೊಂಡ ತಾಲೂಕ ಮಟ್ಟದ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರ ಸಹಪಠ್ಯ ಚಟುವಟಿಕೆ ಸ್ಪರ್ಧಾ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ವರ್ಷವಿಡೀ ತರಗತಿ ಬೋಧನೆಯಲ್ಲಿ ನಿರತರಾಗುವ ಶಿಕ್ಷಕರು, ತಮ್ಮಲ್ಲಿ ಹುದುಗಿರುವ ವಿವಿಧ ಪ್ರತಿಭೆಗಳನ್ನು ಅಭಿವ್ಯಕ್ತಿಗೊಳಿಸಲು ಶಿಕ್ಷಕರ ಕಲ್ಯಾಣ ನಿಧಿಯು ಉತ್ತಮ ಅವಕಾಶ ಕಲ್ಪಿಸಿದೆ. ಸ್ಪರ್ಧೆಗಳಲ್ಲಿ ಭಾಗವಹಿಸುವ ಮೂಲಕ ಶಿಕ್ಷಕರು ತಮ್ಮ ಶಾಲೆಗಳಲ್ಲೂ ವಿವಿಧ ಸಹಪಠ್ಯ ಚಟುವಟಿಕೆಗಳನ್ನು ಏರ್ಪಡಿಸುವ ಸಾಮರ್ಥ್ಯ ಹೊಂದಲಿ. ಶಿಕ್ಷಕರು ಇಂತಹ ಕಾರ್ಯಕ್ರಮಗಳ ಸದುಪಯೋಗ ಪಡಿಸಿಕೊಳ್ಳಬೇಕು ಎಂದು ಹೇಳಿದರು.

ಕಾರ್ಯಕ್ರಮದ ನೋಡಲ್ ಅಧಿಕಾರಿ ಆನಂದ ಹುಣಸಗಿ ಪ್ರಾಸ್ತಾವಿಕ ಮಾತನಾಡಿ, ಶಿಕ್ಷಕರ ಪ್ರತಿಭೆಯು ಬದುಕಿನ ಒತ್ತಡದ ನಡುವೆ ಕಮರಿ ಹೋಗಬಾರದು. ಅದು ಶಾಲೆಯಲ್ಲಿ ಮಕ್ಕಳ ಶೈಕ್ಷಣಿಕ ಅಭಿವೃದ್ಧಿಗೆ ದಾರಿ ತೋರಬೇಕು. ಭವಿಷ್ಯದ ಪ್ರಜೆಗಳನ್ನು ರೂಪಿಸುವ ಹೊಣೆ ಹೊತ್ತಿರುವ ಶಿಕ್ಷಕರು ತಮ್ಮ ಪ್ರತಿಭೆ ಹೊರ ಪ್ರಪಂಚಕ್ಕೆ ಹರಿಯುವಂತೆ ಮಾಡಬೇಕು. ಶೈಕ್ಷಣಿಕವಾಗಿ ಹಿಂದುಳಿದ ಮಕ್ಕಳಲ್ಲೂ ವಿವಿಧ ಪ್ರತಿಭೆಗಳಿರುವ ಕಾರಣ ಆ ಮಕ್ಕಳಿಗೆ ಪ್ರೋತ್ಸಾಹ ನೀಡಿ ಜೀವ ತುಂಬಬೇಕು ಎಂದು ಹೇಳುತ್ತಾ ಸ್ಪರ್ಧೆಯ ನಿಯಮಗಳನ್ನು ತಿಳಿಸಿದರು.

ಎಲ್ಲ ಸ್ಪರ್ಧೆಯ ವಿಜೇತರಿಗೆ ಪ್ರಶಸ್ತಿ ಪತ್ರ ನೀಡಲಾಯಿತು.

ಶಿಕ್ಷಣ ಸಂಯೋಜಕರಾದ ಎನ್ ಪಿ ಪೂಜಾರಿ, ಆರ್ ಪಿ ಮಿಸಾಳೆ, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಉಪಾಧ್ಯಕ್ಷ ರವಿ ಗಿಣ್ಣಿ, ಪ್ರೌಢ ಶಾಲಾ ದೈಹಿಕ ಶಿಕ್ಷಕರ ಸಂಘದ ಅಧ್ಯಕ್ಷ ಟಿ ಎಸ್ ಹೊಸಮನಿ, ಸಹಶಿಕ್ಷಕರ ಸಂಘದ ಅಧ್ಯಕ್ಷ ಅಣ್ಣಾರಾಯ ಬಿರಾದಾರ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಉಪಾಧ್ಯಕ್ಷ ಟಿ ಕೆ ಜಂಬಗಿ, ಸಂಘಟನಾ ಕಾರ್ಯದರ್ಶಿ ಟಿ ಕೆ ಪೂಜಾರಿ, ಕಚೇರಿ ಅಧೀಕ್ಷಕ ಸಿ ಎಂ ಹಿರೇಮಠ ಸೇರಿದಂತೆ ಅನೇಕರು ಉಪಸ್ಥಿತರಿದ್ದರು. ಶಿಕ್ಷಕ ಪರಶುರಾಮ ತಳವಾರ ನಿರೂಪಿಸಿದರು. ಶಿಕ್ಷಕ ವೈ ಜಿ ಬಿರಾದಾರ ಸ್ವಾಗತಿಸಿದರು. ರವಿ ಬಿರಾದಾರ ವಂದಿಸಿದರು.



ಜಿಲ್ಲಾ ಮಟ್ಟದ ಕ್ರೀಡಾಕೂಟದಲ್ಲಿ ಪ್ರಥಮ ಸ್ಥಾನ

■ ಉದಯರಶ್ಮಿ ದಿನಪತ್ರಿಕೆ

ಸಿಂದಗಿ: 2026–27ನೇ ಸಾಲಿನ ವಿಜಯಪುರ ಜಿಲ್ಲಾ ಮಟ್ಟದ ಪ್ರೌಢಶಾಲಾ ವಿಭಾಗದ ಕ್ರೀಡಾಕೂಟದಲ್ಲಿ ಸಿಂದಗಿಯ ಪಿ.ಎಂ.ಶ್ರೀ ಆದರ್ಶ ವಿದ್ಯಾಲಯದ ಬಾಲಕರ ಥ್ರೋಬಾಲ್ ತಂಡ ಪ್ರಥಮ ಸ್ಥಾನ ಪಡೆದು ವಿಭಾಗ ಮಟ್ಟಕ್ಕೆ ಆಯ್ಕೆಯಾಗಿದೆ. ವಿದ್ಯಾರ್ಥಿಗಳ ಈ ಅತ್ಯುತ್ತಮ ಸಾಧನೆಗೆ ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷರು, ಮುಖ್ಯೋಪಾಧ್ಯಾಯರು, ದೈಹಿಕ ಶಿಕ್ಷಣ ಶಿಕ್ಷಕರು ಹಾಗೂ ಸಮಸ್ತ ಶಿಕ್ಷಕ ವೃಂದದವರು ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸಿದ್ದಾರೆ.

ವಿಜಯಪುರ ಎಸ್ಪಿ ಲಕ್ಷ್ಮಣ ನಿಂಬರಗಿ ರಿಗೆ ಸನ್ಮಾನ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ನಗರದ ಸ್ಫೂರ್ತಿ ಫೌಂಡೇಶನ್ ವತಿಯಿಂದ ವಿಜಯಪುರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮಣ ಬಿ ನಿಂಬರಗಿ ಖಕಖ ರವರಿಗೆ ಸ್ಫೂರ್ತಿ ಫೌಂಡೇಶನ್ ಅಧ್ಯಕ್ಷರಾದ ಅರುಣ ಹುಂಡೇಕಾರ ಮತ್ತು ಸದಸ್ಯರಿಂದ ಸನ್ಮಾನ ಕಾರ್ಯಕ್ರಮ ಮಾಡಲಾಯಿತು

ಈ ಸಂದರ್ಭದಲ್ಲಿ ಅರುಣ ಹುಂಡೇಕಾರ ಅವರು ಮಾತನಾಡಿ, ನಗರದಲ್ಲಿ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡುವಲ್ಲಿ ಹಾಗೂ ಸಾರ್ವಜನಿಕ ಸುರಕ್ಷತೆಯನ್ನು ಕಾಪಾಡುವಲ್ಲಿ ತಾವು ತೋರುತ್ತಿರುವ ಸಮರ್ಪಿತ ಸೇವೆ ನಾಯಕತ್ವ, ಆಡಳಿತ ಮತ್ತು ಬದ್ಧತೆಯನ್ನು ನಾವು ಮನಪೂರ್ವಕವಾಗಿ ಶ್ಲಾಘಿಸುತ್ತೇವೆ .

ತಮ್ಮ ಪ್ರಯತ್ನಗಳು ಮತ್ತು ವೃತ್ತಿಪರತೆ ನಿಜಕ್ಕೂ ಪ್ರಶಂಶನಿಯ ಎಂದು ತಿಳಿಸಿದರು. ಹಾಗೂ ಸ್ಫೂರ್ತಿ ಫೌಂಡೇಶನ್ ಗ್ರಂಥಾಲಯದಲ್ಲಿ ಓದಿ 4000 ಕ್ಕೂ ಅಧಿಕ ವಿದ್ಯಾರ್ಥಿಗಳು ಪೋಲಿಸ್ ಮತ್ತು ವಿವಿಧ ಇಲಾಖೆಗಳಲ್ಲಿ ಆಯ್ಕೆಯಾಗಿ ಸೇವೆ ಸಲ್ಲಿಸುತ್ತಿದ್ದಾರೆ ಎಂದು ತಿಳಿಸಿದರು .

ಈ ಸಂದರ್ಭದಲ್ಲಿ ಡಾ.ಶೈಲಜಾ ಪಾಟೀಲ ಮಾತನಾಡಿ, ಸ್ಫೂರ್ತಿ ಫೌಂಡೇಶನ್ ಗ್ರಂಥಾಲಯ 2015 ರಲ್ಲಿ ಸ್ಥಾಪನೆಯಾಗಿದ್ದು ಇದು ಹತ್ತನೇ ತರಗತಿ ಸ್ನೇಹಿತರು ಕೂಡಿ ಸಮಾಜಕ್ಕೆ ಒಂದು ನಿಸ್ವಾರ್ಥ ಸೇವೆ ಸಲ್ಲಿಸುವ ಉದ್ದೇಶದಿಂದ ವಿದ್ಯಾರ್ಥಿಗಳಿಗೆ ಉಚಿತ ಗ್ರಂಥಾಲಯ ವ್ಯವಸ್ಥೆಯನ್ನು ಮತ್ತು ಫೌಂಡೇಶನ್ ವತಿಯಿಂದ ಉಚಿತವಾಗಿ ಆಂಬುಲೆನ್ಸ್ ಸೇವೆ